ನೋಡಿದರೆ ನನಗೆ ಏಕೋ ಸ್ವಲ್ಪ ಬೇಸರವಾಗಿದೆ. ಅಷ್ಟು ಪರಿಣಾಮಕಾರಿಯಾಗಿ ಅವರು ಮಾತನಾಡಲಿಲ್ಲ.

ಶ್ರೀ ಸಿದ್ದರಾಮಯ್ಯ: ನೀವು ಮಾತನಾಡಿದ್ದರೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದಿರಿ ಏಕೋ ನೀವು ಮಾತನಾಡಿಲ್ಲ. ಬಸವರಾಜ ರಾಯರೆಡ್ಡಿಯವರು ಬಹಳ ಸಮರ್ಥನೆ ಮಾಡಿ ಅಂಕಿ–ಅಂಶಗಳ ಸಮೇತ ಮಾತನಾಡಿದ್ದಾರೆ. ನಾನು ಅವರಿಗೂ ಕೂಡ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಸಮಾಧಾನಕರ ಬಹುಮಾನ.

ಶ್ರೀ ಬಸವರಾಜ ರಾಯರೆಡ್ಡಿ: ಅವರು ಅಭಿನಂದನೆಗಳನ್ನು ಸಲ್ಲಿಸುತ್ತಾರೆಂದರೂ ಅದನ್ನು ಸಹಿಸಿಕೊಳ್ಳುತ್ತಿಲ್ಲವಲ್ಲ.

ಶ್ರೀ ಸಿದ್ದರಾಮಯ್ಯ: ರಾಯರೆಡ್ಡಿಯವರೆ, ಅವರಿಗೆ ಅದನ್ನು ಸಹಿಸಿಕೊಳ್ಳುವುದಕ್ಕಾಗುತ್ತಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಮುಖ್ಯಮಂತ್ರಿಗಳೇ, ವಿರೋಧ ಪಕ್ಷದವರಿಗೆ ನಮ್ಮ ಮೇಲೆ ಎಷ್ಟು ಹೊಟ್ಟೆಕಿಚ್ಚು ಎಂದರೆ, ಕನಿಷ್ಠ ಅಭಿನಂದನೆಯಾದರೂ ಸಲ್ಲಿಸುತ್ತಿದ್ದಾರೆ, ಬೇರೆ ಏನು ಮಾಡುವುದು ಬೇಡ. Let him thank me. That is all.

4. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು): ವಿರೋಧ ಪಕ್ಷದ ನಾಯಕರು, ಮಾನ್ಯ ಕುಮಾರಸ್ವಾಮಿಯವರು, ಬೋಪಯ್ಯನವರು, ಕಾರಜೋಳ್‌ರವರು, ನಮ್ಮ ಭಾಗದಿಂದ ಮಾನ್ಯ ರಮೇಶ್ ಕುಮಾರ್‌ರವರು ಮತ್ತು ಇತರೆ ಒಟ್ಟು 18 ಜನ ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಲ್ಲಿ ಭಾಗವಹಿಸಿ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಜೊತೆಗೆ ಟೀಕೆಗಳನ್ನೂ ಕೂಡ ಮಾಡಿದ್ದಾರೆ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ

ಹಾಗೂ ಸಂಸದೀಯ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಟೀಕೆಗಳನ್ನು ಕೂಡ ಸಮಚಿತ್ತದಿಂದ ನಾವು ಸ್ವೀಕರಿಸಬೇಕಾಗುತ್ತದೆ. ನಾನು ಅವರು ಕೊಟ್ಟಿರುವ ಎಲ್ಲಾ ಸಲಹೆಗಳನ್ನು, ಎಲ್ಲಾ ಟೀಕೆಗಳನ್ನೂ ಸಹ ಸಮಚಿತ್ತದಿಂದ ಸ್ವೀಕಾರ ಮಾಡಿದ್ದೇನೆ. ಬಹಳಷ್ಟು ಒಳ್ಳೆಯ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಕುಮಾರಸ್ವಾಮಿಯವರೂ ಕೂಡ ಇಂದು ಅವರು ಬೆಳಿಗ್ಗೆ ಮಾತನಾಡಿದ್ದನ್ನು ನಾನು ಕೇಳಿದೆ. ಅವರಿಗೆ ಇನ್ನೂ ಸಮಯ ಬೇಕಾಗಿತ್ತು. ನಿನ್ನೆ ಅವರು ಬಂದಿದ್ದರೆ ಇನ್ನೂ ಸ್ವಲ್ಪ ಟೈಂ ಜಾಸ್ತಿ ಸಿಗುತ್ತಿತ್ತೋ ಏನೋ? ನಿನ್ನೆ ನೀವು ನಿಮ್ಮ ಕಾರ್ಯಕ್ರಮ ಇಟ್ಟುಕೊಂಡಿದ್ದರಿಂದ ನಿಮಗೆ ಬರಲಿಕ್ಕಾಗಿಲ್ಲ. ಬಂದಿದ್ದರೆ ಹೆಚ್ಚು ಸಮಯ ಸಿಕ್ಕಿರುವುದು ಇನ್ನೂ ಹೆಚ್ಚು ಮಾತನಾಡಲಿಕ್ಕೆ ಅವಕಾಶವಾಗುತ್ತಿತ್ತು. ವಿರೋಧ ಪಕ್ಷದ ನಾಯಕರಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ಬಹಳ ದೀರ್ಘವಾಗಿ ಮಾತನಾಡಿದ್ದಾರೆ. ಅವರು ಹೆಚ್ಚಾಗಿ ವಾರ್ತಾ ಪತ್ರಿಕೆಗಳಲ್ಲಿ ಬಂದಿರುವ ವರದಿಗಳನ್ನು ಆಧರಿಸಿ ಹೆಚ್ಚು ಮಾತನಾಡಿದ್ದಾರೆ. ಅವರು ಈ ಸರ್ಕಾರದ ಆಡಳಿತ ಎಲ್ಲಾ ನಿಷ್ಕ್ರಿಯವಾಗಿದೆ, ಏನೂ ಬದಲಾವಣೆಯಾಗಿಲ್ಲ, ಮುಖ್ಯಮಂತ್ರಿಗಳಿಗೆ ಅಧಿಕಾರಿಗಳ ಮೇಲೆ ಹಿಡಿತವಿಲ್ಲ, ಯಾವ ಮಂತ್ರಿಗಳಿಗೂ ಕೂಡ ಅವರವರ ಇಲಾಖೆಯಲ್ಲಿ ಹಿಡಿತವಿಲ್ಲ, ಅಧಿಕಾರಿಗಳು ಸ್ವೇಚ್ಛೆಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಮೇಲೆ ಏನೂ ಕೂಡ ಕಮ ತೆಗೆದುಕೊಳ್ಳುತ್ತಿಲ್ಲವೆನ್ನುವ ಮಾತುಗಳನ್ನೆಲ್ಲಾ ಹೇಳಿದ್ದಾರೆ. ಅದಕ್ಕೆ ನಾನು ಈ ಸದನ ಪ್ರಾರಂಭವಾಗುವ ಹಿಂದಿನ ದಿನ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಣಾಧಿಕಾರಿಗಳು, ಕಾರ್ಯದರ್ಶಿಗಳ ಒಂದು ಸಭೆ ಮಾಡಿದೆ. ನಮ್ಮ ಸರ್ಕಾರ ಬಂದ 8 ತಿಂಗಳಲ್ಲಿ ಇದು ಮೂರನೆ ಸಭೆ. ಅಲ್ಲಿ ನಾನು ಮಾತನಾಡುವಾಗ ಕಠಿಣವಾದ ಶಬ್ದಗಳನ್ನು ಬಳಸಿದ್ದೆ. ಕಠಿಣವಾದ ಶಬ್ದಗಳನ್ನು ನಾನು ಬಳಸಿದ್ದೆ ಎನ್ನುವುದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅದನ್ನೇ ಆಧಾರವಾಗಿಟ್ಟುಕೊಂಡು ಮುಖ್ಯಮಂತ್ರಿಗಳ ಮಾತುಗಳೆ, ಅವರು ಬಳಸಿರತಕ್ಕಂಥ ಪದಗಳೆ, ಆಡಳಿತ ಸರಿಯಿಲ್ಲ ಎನ್ನಲಿಕ್ಕೆ ಅವುಗಳು ಸಾಕಷ್ಟು ಪುರಾವೆಗಳಾಗುತ್ತವೆ ಎನ್ನುವ ಮಾತುಗಳನ್ನೂ ಕೂಡ ಅವರು ಹೇಳಿದರು. ನಾನು ಕೆಲವು ಕಠಿಣವಾದ ಶಬ್ದಗಳನ್ನು ಬಳಸಿರುವುದು ನಿಜ. ಇನ್ನೂ ಹೆಚ್ಚು ಆಡಳಿತ ಚುರುಕಾಗಲಿ ಎನ್ನುವ ಕಾರಣಕ್ಕಾಗಿ ನಾನು ಆ ಶಬ್ದಗಳನ್ನು

ಬಳಸಿದ್ದೇನೆ. ಅದರ ಅರ್ಥ ಆಡಳಿತ ಸರಿಯಾಗಿಲ್ಲ ಎನ್ನುವ ಅರ್ಥವಲ್ಲ. ಅಧಿಕಾರಿಗಳು ಇನ್ನೂ ಹೆಚ್ಚು ಚುರುಕಾಗಬೇಕು, ಇನ್ನೂ ಹೆಚ್ಚು ವೇಗವಾಗಿ ಕೆಲಸ ಮಾಡಬೇಕು, ಆಡಳಿತದಲ್ಲಿ ದಕ್ಷತೆ ತರಬೇಕು, ಭಷ್ಟಾಚಾರ ಕಡಿಮೆಯಾಗಬೇಕು, ಪಾರದರ್ಶಕತೆ ಇರಬೇಕು, ನಾವು ಜನರಿಗೆ ಉತ್ತರದಾಯಿತ್ವ ಇರುವ ರೀತಿಯಲ್ಲಿ ಆಡಳಿತ ಇರಬೇಕು. ಇದಕ್ಕೋಸ್ಕರ ಕೆಲವು ಮಾತುಗಳನ್ನು ರಿವ್ಯೂ ಮೀಟಿಂಗ್‌ನಲ್ಲಿ ಆಡಿರತಕ್ಕಂಥ ಮಾತುಗಳನ್ನೇ ತೆಗೆದುಕೊಂಡು ಅದು ಆಡಳಿತ ಸರಿಯಿಲ್ಲವೆಂದು ಹೇಳತಕ್ಕ ಮಾತು, ಅದು ವಾಸ್ತವಿಕ ಸಂಗತಿಗಳಲ್ಲ ಎನ್ನತಕ್ಕಂಥ ಮಾತುಗಳನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ರಾಯರೆಡ್ಡಿಯವರು, ಮಂತ್ರಿಗಳು ಸಿಗುತ್ತಿಲ್ಲ, ಅಧಿಕಾರಿಗಳು ಸಿಗುತ್ತಿಲ್ಲ, ಎಂದು ಈ ರೀತಿಯಾಗಿ ಅವರು ಪತ್ರ ಬರೆದಿದ್ದಾರೆ. ನಾನು ಯಾವ ಅಧಿಕಾರಿಯನ್ನು ಸಹ defend ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಶಾಸಕರು ಅಧಿಕಾರಿಗಳನ್ನು ಭೇಟಿ ಮಾಡಬೇಕೆಂದಾಗ ಭೇಟಿ ಮಾಡಬೇಕಾಗುತ್ತದೆ. ಆದ್ದರಿಂದ, ನಾನು ಎಲ್ಲ ಅಧಿಕಾರಿಗಳಿಗೆ ಪತ್ರ ಬರೆದು ಅಧಿಕಾರಿಗಳು ನಿಗದಿತ ಸಮಯದಲ್ಲಿ ಮಾನ್ಯ ಶಾಸಕರುಗಳಿಗೆ ಸಿಗಬೇಕೆಂದು ಹೇಳಿದ್ದೇನೆ. ಹಾಗೆಯೇ ಮಾನ್ಯ ಮಂತ್ರಿಗಳು ಸಹ ಸಿಗಬೇಕೆಂಬ ಸೂಚನೆಯನ್ನು ಈಗಾಗಲೇ ಎಲ್ಲ ಮಂತ್ರಿಗಳಿಗೆ ಕೊಟ್ಟಿದ್ದೇನೆ. ಆದ್ದರಿಂದ, ಆಡಳಿತ ವ್ಯವಸ್ಥೆ ಕುಸಿದು ಹೋಗಿದೆ ಎಂಬ ಅರ್ಥವಲ್ಲ. ಅನೇಕ ಜನ ಶಾಸಕರುಗಳು ಹೋದಂಥ ಸಂದರ್ಭದಲ್ಲಿ ಅಧಿಕಾರಿಗಳು ಮತ್ತು ಮಾನ್ಯ ಸಚಿವರು ಸಿಗದೇ ಹೋದರೆ ಸ್ವಲ್ಪ ಅಸಮಾಧಾನ ಸ್ವಾಭಾವಿಕವಾಗಿ ಆಗುತ್ತದೆ. ನಾವು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕಂಥವರು. ಅದರಲ್ಲಿಯೂ ಆಂತರಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಲವಾದಂಥ ನಂಬಿಕೆಯನ್ನು ಇಟ್ಟುಕೊಂಡಿರತಕ್ಕಂಥವರು. ಆ ಕಾರಣದಿಂದ ಮಾನ್ಯ ರಾಯರೆಡ್ಡಿಯವರು ಪತ್ರ ಬರೆದಿದ್ದಾರೆ. ಅದರಲ್ಲಿ ಯಾವುದೇ ತಪ್ಪು ಇಲ್ಲವೆಂಬ ಮಾತನ್ನೂ ಕೂಡ ಅತ್ಯಂತ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಈಗ ನೀವೂ ಕೂಡ ಕೆಲವು ವಿಚಾರಗಳನ್ನು ಹೇಳುತ್ತೀರಿ. ನಿಮ್ಮ ಸಲಹೆಗಳು ಆಡಳಿತವನ್ನು ಚುರುಕುಗೊಳಿಸುವುದಕ್ಕೆ ಸಹಕಾರಿಯಾಗಿದ್ದರೆ ಖಂಡಿತವಾಗಿ ಸಲಹೆಗಳನ್ನೂ ಕೂಡ ನಾವು ಸ್ವೀಕಾರ ಮಾಡುತ್ತೇವೆ. ಹಾಗೆಯೇ ಅವುಗಳನ್ನು

ಜಾರಿ ಮಾಡತಕ್ಕಂಥ ಪ್ರಯತ್ನ ಕೂಡ ಮಾಡುತ್ತೇವೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಕುಮಾರ ಸ್ವಾಮಿಯವರು ಅನೇಕ ವಿಷಯಗಳನ್ನು ಇವತ್ತು ಗಮನಕ್ಕೆ ತಂದಿದ್ದಾರೆ. ನಿಮ್ಮಲ್ಲಿ ಏನೇನು ದಾಖಲಾತಿಗಳಿವೆಯೋ ಅವೆಲ್ಲವನ್ನೂ ನಮಗೆ ಕೊಡಿ. ಯಾವ್ಯಾವ ಅಧಿಕಾರಿಗಳು ನಿರ್ಲಕ್ಷ್ಯದಿಂದ, ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆಯೋ ಅವರ ಮೇಲೆ ಕಠಿಣವಾದಂಥ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನೂ ಸಹ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಆಡಳಿತ ವ್ಯವಸ್ಥೆ deteriorate ಆಗುತ್ತಾ ಇದೆ. ಅದರಲ್ಲೂ ಐದು ವರ್ಷ ಬಿಜೆಪಿ ಸರ್ಕಾರ ಇದ್ದಾಗ ಆಡಳಿತ ಬಹಳ ಜಡತ್ವ, ತುಕ್ಕು ಹಿಡಿದುಬಿಟ್ಟಿತ್ತು 5 ವರ್ಷದಿಂದ ತುಕ್ಕು ಹಿಡಿದಿರುವುದನ್ನು ಸರಿಪಡಿಸತಕ್ಕಂಥದ್ದು ಕೇವಲ 8 ತಿಂಗಳಲ್ಲಿ ಸಾಧ್ಯವಾಗುತ್ತದೆಂದು ನಾನೂ ಸಹ ಅಂದುಕೊಂಡಿಲ್ಲ. 8 ತಿಂಗಳಲ್ಲಿ ಎಲ್ಲ ಬದಲಾವಣೆ ಆಗಿ ಭಷ್ಟಾಚಾರ ಹೋಗಿದೆ ಎಂಬ ಭ್ರಮೆ ಕೂಡ ನನಗೆ ಇಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಮುಖ್ಯಮಂತ್ರಿಗಳೇ, ಇವತ್ತಿನ ದಿವಸ ರಾಜಕಾರಣ one day match ಇದ್ದಂತೆ, ಸಿಕ್ಕಿರುವ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು. ಆದ್ದರಿಂದ, 8 ತಿಂಗಳು, 5 ವರ್ಷ ಎನ್ನುವುದಕ್ಕಿಂಥ ಹೆಚ್ಚಾಗಿ ಸಿಕ್ಕಿರುವ ಅವಕಾಶವನ್ನು ಕಾಲಹರಣ ಮಾಡದೇ ಸ್ವಲ್ಪ ಆದಷ್ಟು ಚುರುಕುಗೊಳಿಸುವುದು ಒಳ್ಳೆಯದು. ಪಾರ್ಲಿಮೆಂಟ್ ಚುನಾವಣೆಯಾದ ಮೇಲೆ ಏನು ಮ್ಯಾಚ್ ಆಡುತ್ತೀರೆಂಬುದನ್ನು ಆನಂತರ ನೋಡೋಣ.

ಶ್ರೀ ಬಸವರಾಜ ರಾಯರೆಡ್ಡಿ: ನಮ್ಮದು 20–20 ಮ್ಯಾಚ್ ಅಲ್ಲ, ನಮ್ಮದು full match.

ಶ್ರೀ ಸಿದ್ದರಾಮಯ್ಯ: ಮಾನ್ಯ ಛೇರ್ಮನ್‌ರವರೆ, ನಮ್ಮ ಪ್ರಕಾರ ಟೆಸ್ಟ್ ಮ್ಯಾಚ್, ಮಾನ್ಯ ಕುಮಾರಸ್ವಾಮಿಯವರ ಪ್ರಕಾರ one day match, ಇನ್ನೂ ಕೆಲವರ ಪ್ರಕಾರ 20–20 ಮ್ಯಾಚ್ ಆಗಿದೆ. ಆದರೆ, ನೋಡೋಣ. ನಾವು ಎಷ್ಟು ದಿವಸ ವೇಗವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟು

ದಿವಸ ವೇಗವಾಗಿ ಕೆಲಸ ಮಾಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಕಳೆದ 8 ತಿಂಗಳಲ್ಲಿ ಒಂದು ದಿನ ಕೂಡ ವಿರಾಮ ತೆಗೆದುಕೊಂಡಿರತಕ್ಕಂಥದ್ದಾಗಲಿ ಅಥವಾ ವಿಶ್ರಾಂತಿ ತೆಗೆದುಕೊಂಡಿರತಕ್ಕಂಥ ದಿನವೇ ಇಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಮುಖ್ಯಮಂತ್ರಿಗಳಾದ ಮೇಲೆ ವಿರಾಮ ತೆಗೆದುಕೊಳ್ಳತಕ್ಕಂಥ ಪ್ರಶ್ನೆಯೇ ಇಲ್ಲ. ಆ ಕುರ್ಚಿಯಲ್ಲಿ ಯಾರೇ ಕುಳಿತರೂ ಸಹ ವಿರಾಮವನ್ನು ಮರೆತೇ ಕುಳಿತುಕೊಂಡಿದ್ದಾರೆ. ಆ ಕುರ್ಚಿಗೆ ವಿರಾಮ ಇಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಬಸವರಾಜ್‌ರವರೇ, ಹಿಂದೆ ಕೂಡ ನೋಡಿದ್ದೇನೆ. ನಾನು ಸುಮಾರು 5 ಜನ ಮುಖ್ಯಮಂತ್ರಿಗಳ ಜೊತೆ ಕೆಲಸ ಮಾಡಿದ್ದೇನೆ. ಮಾನ್ಯ ರಾಮಕೃಷ್ಣ ಹೆಗಡೆ, ಮಾನ್ಯ ಎಸ್.ಆರ್. ಬೊಮ್ಮಾಯಿ, ಮಾನ್ಯ ದೇವೇಗೌಡರು, ಮಾನ್ಯ ಜೆ.ಹೆಚ್. ಪಟೇಲ್ ಮತ್ತು ಮಾನ್ಯ ಧರ್ಮಸಿಂಗ್‌ರವರ ಜೊತೆಯಲ್ಲಿ ನಾನು ಕೆಲಸ ಮಾಡಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸಿದ್ದರಾಮಯ್ಯನವರೇ, ನಿಮಗೆ ಜನರ ಒತ್ತಡ ಇರುತ್ತದೆ ಅಥವಾ ನಿಮ್ಮವರ ಕಾಟ ಇರುತ್ತದೆ. ಆದ್ದರಿಂದ, ನಿಮಗೆ ವಿಶ್ರಾಂತಿ ಎನ್ನುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಎಲ್ಲಾ ಕಾಟಗಳನ್ನು ಕೂಡ ಅತ್ಯಂತ ಯಶಸ್ವಿಯಾಗಿ ದಕ್ಷತೆಯಿಂದ ನಿರ್ವಹಿಸತಕ್ಕಂಥ ವಿಶ್ವಾಸ ನನಗೆ ಇದೆ. Why do you worry? ನೀವು ನನಗೆ ಒಳ್ಳೆಯ ಸ್ನೇಹಿತರು.

ಶ್ರೀ ಬಸವರಾಜ ಬೊಮ್ಮಾಯಿ: ಆದ್ದರಿಂದಲೇ ನಾನು ಒಳ್ಳೆಯ ಉದ್ದೇಶದಿಂದ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: ನೀವು ಒಳ್ಳೆಯ ಉದ್ದೇಶದಿಂದ ಹೇಳಿದ್ದೀರಿ. ಆದರೆ, ಯಾವುದೇ ಕಾಟ ನಮಗೆ ಇಲ್ಲ. ಕಾಟಗೀಟ ಇದ್ದರೆ ಅದು ನಿಮ್ಮ ಕಡೆಯಿಂದ ಬರಬೇಕೇ ವಿನ: ನಮ್ಮ ಕಡೆಯಿಂದ ಏನೂ ಬರುವುದಿಲ್ಲ. ನಿಮ್ಮ ಕಡೆಯಿಂದ ಇಲ್ಲವೇ, ಹಾಗಾದರೆ ಬಿಡಿ ಹೋಗಲಿ. ಅದು ನನಗೆ ಗೊತ್ತಿಲ್ಲ.

ನನ್ನ ವೈರಿಗೂ ಕೂಡ ಇಂಥ ಕಾಟ ಬರಬಾರದೆಂದು ಮಾನ್ಯ ಯಡಿಯೂರಪ್ಪನವರು ಹೇಳುತ್ತಿದ್ದರು, ಅದು ನನಗೆ ಗೊತ್ತಿದೆ.

ಶ್ರೀ ಬಸವರಾಜ ಬೊಮ್ಮಾಯಿ: ನಿಮ್ಮಲ್ಲಿ ಈಗಲೇ ಕಾಟ ಪ್ರಾರಂಭವಾಗಿದೆ. ನಮ್ಮಲ್ಲಿ ಮೊದಲ ಎರಡು ವರ್ಷ ಏನೂ ಕಾಟ ಇರಲಿಲ್ಲ. ಆದರೆ, ನಿಮಗೆ ಪ್ರಾರಂಭದಲ್ಲಿಯೇ ಇಷ್ಟು ಕಾಟ ಇದ್ದ ಮೇಲೆ ಮುಂದೆ ಏನಿದೆ ಎಂದು ನಿಮ್ಮ ಬಗ್ಗೆ ಚಿಂತನೆ ಮಾಡುವುದಕ್ಕೆ ಶುರು ಮಾಡಿದ್ದೇನೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮುಂದೆ ಕೂಡ ಚಿಂತೆ ಮಾಡಿಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಜಗದೀಶ್ ಶೆಟ್ಟರ್‌ರವರು ಒಂದು ಮಾತನ್ನು ಹೇಳುತ್ತಿದ್ದರು. ಅದೇನೆಂದರೆ, ಸಿದ್ದರಾಮಯ್ಯನವರು ಬಹಳ ಖಡಕ್ ಆಗಿರುತ್ತಾರೆ, ಸ್ವಾಭಿಮಾನದಿಂದ ಇರುತ್ತಾರೆ, ಆತ್ಮಾಭಿಮಾನ ಇಟ್ಟುಕೊಂಡಿರುತ್ತಾರೆಂದು ತಿಳಿದುಕೊಂಡಿದ್ದೆವು. ಆದರೆ, ಅವರು ಇತ್ತೀಚೆಗೆ ರಾಜಿ ಮನೋಭಾವ ಬೆಳೆಸಿಕೊಂಡು ಸ್ವಾಭಿಮಾನವನ್ನು ಬಿಟ್ಟುಬಿಟ್ಟಿದ್ದಾರೆ ಎಂದು ಹೇಳುತ್ತಿದ್ದರು. ಆದರೆ, ಮಾನ್ಯ ಬಸವರಾಜ್‌ರವರೆ, ನಾನು ಇಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ನಾನು ರಾಜಕೀಯದಲ್ಲಿ ಒಂದು ಕ್ಷಣ ಕೂಡ ಸ್ವಾಭಿಮಾನ ಬಿಟ್ಟು ರಾಜಕಾರಣ ಮಾಡುವುದಕ್ಕೆ ಸಾಧ್ಯವೇ ಇಲ್ಲ ಎನ್ನತಕ್ಕಂಥ ಮಾತುಗಳನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ವೈ.ಎಸ್.ವಿ. ದತ್ತ: ಮಾನ್ಯ ಮುಖ್ಯಮಂತ್ರಿಗಳೇ, ಇದು ಕರ್ನಾಟಕದ ಜನತೆಗೆ ಸಂದೇಶವೋ ಅಥವಾ ಕಾಂಗ್ರೆಸ್‌ನವರಿಗೆ ಸಂದೇಶವೋ?

ಶ್ರೀ ಸಿದ್ದರಾಮಯ್ಯ: ಈ ಸದನದಿಂದ ನಾವು ಈ ರಾಜ್ಯದ ಜನತೆಗೆ ಜವಾಬ್ದಾರರು. ಆದ್ದರಿಂದ, ಇಲ್ಲಿಂದ ಯಾರಿಗೆ ಸಂದೇಶ ಕೊಡಬೇಕು? ರಾಜ್ಯದ ಜನತೆಗೆ ಸಂದೇಶ ಕೊಡಬೇಕಾಗುತ್ತದೆ. ಇಷ್ಟೂ ಸಹ ನಿನಗೆ ಅರ್ಥವಾಗಲಿಲ್ಲವೇ?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸಿದ್ದರಾಮಯ್ಯನವರೆ, ನಾವು ದೆಹಲಿಗೆ ಹೋದಂಥ ಸಂದರ್ಭದಲ್ಲಿ ನನ್ನ ವಿರುದ್ಧ ತೊಡೆ ತಟ್ಟುತ್ತಿದ್ದಾರೆ, ಅದನ್ನು ಎದುರಿಸಬೇಕೆಂದು ತಾವು ಹೇಳಿದ್ದೀರಿ. ಬಹುಶ: ತೊಡೆ ತಟ್ಟುವವರು ನಿಮ್ಮಲ್ಲಿಯೇ ಇದ್ದಾರೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಸಿದ್ದರಾಮಯ್ಯ: ಆ ಮಾತನ್ನು ನಿಮಗೆ ಹೇಳಿದ್ದೆ. ಏತಕ್ಕೆ ಎಂದರೆ, ವಿರೋಧ ಪಕ್ಷದವರು ಸುಳ್ಳು ಆಪಾದನೆಗಳನ್ನು ಮಾಡುತ್ತಾರೆ, ಅವೆಲ್ಲವನ್ನೂ ಎದುರಿಸಬೇಕಾಗುತ್ತದೆ ಎಂದು ಹೇಳುವಾಗ ತೊಡೆ ತಟ್ಟುತ್ತಾರೆಂಬ ಮಾತು ಬಂದಿದೆ. ಒಂದೊಂದು ಸಾರಿ ಏನು ಮಾಡುವುದಕ್ಕೂ ಆಗುವುದಿಲ್ಲ. ವಿರೋಧ ಪಕ್ಷದವರು ಸುಳ್ಳು ಆಪಾದನೆ ಮಾಡುತ್ತಾರೆ. ಇದರ ಬಗ್ಗೆ ಹೇಳುವುದಾದರೆ, ಅಡಿಕೆ ಬೆಳೆ ಬಗ್ಗೆ ಬಹಳಷ್ಟು ಅಪಪ್ರಚಾರ ಮಾಡಿದ್ದೀರಿ. ಇದರ ಬಗ್ಗೆ ಬಿಜೆಪಿಯವರು ಬಹಳಷ್ಟು ಕಡೆ ಸಾರ್ವಜನಿಕ ಸಭೆಗಳನ್ನು ಮಾಡಿ ನಮ್ಮ ಬಗ್ಗೆ ಅಪಪ್ರಚಾರ ಮಾಡಿದ್ದೀರಿ. ಅದನ್ನು ನಾವೇ ನಿಷೇಧ ಮಾಡಿದ್ದೇವೆ ಎನ್ನುವ ರೀತಿಯಲ್ಲಿ ಅಪಪ್ರಚಾರ ಮಾಡಿದ್ದೀರಿ. ಇದು ನಿಜನಾ? ಆ ಪ್ರಸ್ತಾಪ ರಾಜ್ಯ ಸರ್ಕಾರದ ಮುಂದೆಯೂ ಇಲ್ಲ, ಕೇಂದ್ರ ಸರ್ಕಾರದ ಮುಂದೆಯೂ ಕೂಡ ಇರಲಿಲ್ಲ. ಯಾವುದೋ ಒಂದು ಅಸೋಸಿಯೇಷನ್‌ರವರು ಸುಪ್ರೀಂ ಕೋರ್ಟ್‌ನಲ್ಲಿ Public Interest Litigation ಹಾಕಿದ್ದಾರೆ. ಆಗ ಅಲ್ಲಿ ಸಾಲಿಸಿಟರ್ ಜನರಲ್‌ರವರು ಒಂದು ಸಬ್‌ಮಿಷನ್ ಮಾಡಿದ್ದಾರೆ. ಆ ಸಬ್‌ಮಿಷನ್ ಮಾಡುವಾಗ ಅಡಿಕೆ ಹಾನಿಕಾರಕವೇ ಅಥವಾ ಹಾನಿಕಾರಕ ಅಲ್ಲವೋ ಎನ್ನತಕ್ಕಂಥದ್ದರ ಬಗ್ಗೆ ಚರ್ಚೆಯಾಗಿದೆ. ಇದರ ಬಗ್ಗೆ ಒಂದು ಸಬ್‌ಮಿಷನ್ ಮಾಡಿದ್ದಾರೆ. ಇಷ್ಟಕ್ಕೆ ಕರ್ನಾಟಕ ರಾಜ್ಯದಲ್ಲಿ ಅಡಿಕೆ ಬೆಳೆಗಾರರಿಗೆ ಮಾರಕವಾಯಿತು ಎಂದು ಅಪಪ್ರಚಾರ ಮಾಡಿದ್ದೀರಿ. ಈ ಬಗ್ಗೆ ನೀವು ಯಾವಾಗ ಸಭೆಗಳನ್ನು ಪ್ರಾರಂಭ ಮಾಡಿದಿರೋ ಆ ತಕ್ಷಣವೇ ನಾನು ದೆಹಲಿಗೆ ಹೋಗಿ ಮಾನ್ಯ ಗುಲಾಂ ನಬಿ ಆಜಾದ್‌ರವರನ್ನು ಭೇಟಿ ಮಾಡಿದೆ. ಮಾನ್ಯ ಜಯಚಂದ್ರರವರು ಅಲ್ಲಿನ ಕಾನೂನು ಸಚಿವರನ್ನು ಭೇಟಿ ಮಾಡಿದ್ದರು. ನಾನು ಮತ್ತು ಮಾನ್ಯ ದೇಶಪಾಂಡೆಯವರು ಹಾಗೂ ಮಾನ್ಯ ಜಯಪ್ರಕಾಶ್

ಹೆಗಡೆಯವರು ಅವರನ್ನು ಭೇಟಿ ಮಾಡಿ ಅವರಿಗೊಂದು ಪತ್ರವನ್ನೂ ಸಹ ಕೊಟ್ಟು ಈ ರೀತಿಯಾದ ಪ್ರಚಾರ ನಡೆಯುತ್ತಿದೆ. ಆದ್ದರಿಂದ, ನಿಮ್ಮ ಸರ್ಕಾರದ ನಿಲುವು ನಮಗೆ ಗೊತ್ತಾಗಬೇಕೆಂದು ಹೇಳಿದ ಮೇಲೆ ಅವರು ನಮ್ಮ ಪತ್ರಕ್ಕೆ ಒಂದು ಉತ್ತರವನ್ನು ಸಹ ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಉತ್ತರ ಏನೆಂದರೆ, "As the matter is pending before the supreme Court and is sub-judice, you will appreciate that I am not in a position to state anything further on the subject than what is already known or has been submitted in court. However, let me allay your fear by saying that our attempt will be to seek a practical solution to the issue and there is, at present, no intention to ban production or cultivation of Areca Nut and its customary usage, per-se" ಎಂದು ಬಹಳ ಸ್ಪಷ್ಟವಾಗಿ ಮಾನ್ಯ ಗುಲಾಂ ನಬಿ ಆಜಾದ್‌ರವರು ಕೊಟ್ಟಿರುವ ಉತ್ತರ.

ಶ್ರೀ ಬಿ.ಬಿ. ನಿಂಗಯ್ಯ: ಅವರು ಹೇಳಿದ್ದಾರೆ. ಆದರೆ ಗೋರಖ್‌ಸಿಂಗ್ ವರದಿಯ ಬಗ್ಗೆ ಹಿಂದೆ ರೈತರಿಗೆ ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಅಯಿತು ನೀವು ಕುಳಿತುಕೊಳ್ಳಿ, ಅದಕೋಸ್ಕರ ಇದಾದ ಮೇಲೆ ಆ Public Interest Litigation ನಲ್ಲಿ ನಮ್ಮ ವಕೀಲರು ಇರಬೇಕೆಂದು ಹೇಳಿ ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ನಮ್ಮ ರಾಜ್ಯವನ್ನು ಪ್ರತಿನಿಧಿಸತಕ್ಕಂಥ ಸೀನಿಯರ್ ವಕೀಲರು ಇರಬೇಕೆಂದು ಹೇಳಿ ಶ್ರೀ ಕೆ.ಎನ್. ಭಟ್ ಎನ್ನುವವರನ್ನು ನಾವು ಈಗಾಗಲೇ ನೇಮಿಸಿಕೊಂಡಿದ್ದೇವೆ. ರಘುಪತಿ ಎಂದು ನಮ್ಮ Standing Counsel ಇದ್ದಾರೆ. ಅವರನ್ನೂ ಕೂಡ ನಾವು ಭೇಟಿ ಮಾಡಿದ್ದೇವೆ. ಬಹಳ ಸ್ಪಷ್ಟವಾಗಿ ಮೊನ್ನೆ ಕೂಡ ಹೇಳಿದ್ದೇನೆ ಇವತ್ತೂ ಕೂಡ ಹೇಳುತ್ತೇನೆ. ಯಾವುದೇ ಕಾರಣಕ್ಕೂ ಅಡಿಕೆ ಬೆಳೆ ನಿಷೇಧ ಆಗುವುದಿಲ್ಲ. ಆಗುವುದಕ್ಕೆ ನಾವು ಬಿಡುವುದಿಲ್ಲ. ಅದಕ್ಕೆ ನಾವು ಒಪ್ಪಿಗೆ ಕೂಡ ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಇನ್ನೊಮ್ಮೆ ಹೇಳುವುದಕ್ಕೆ ಬಯಸುತ್ತೇನೆ. ಈ ತರಹದ ಪ್ರಚಾರಗಳಿಂದ ರಾಜಕೀಯ ಲಾಭ ಸಿಗುತ್ತದೆಂದರೆ ಏನೂ ರಾಜಕೀಯ ಲಾಭ

ಆಗುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರು ಒಂದು ಮಾತು ಹೇಳಿದರು. 'ಸಿದ್ದರಾಮಯ್ಯನವರು ಕಳಂಕಿತರನ್ನು ಮಂತ್ರಿ ಮಾಡಿಕೊಂಡು ಬಿಡುತ್ತಾರೆ.' ಎಂದು. ಹಿಂದೆ ಮಾಡಿಕೊಳ್ಳುವುದಿಲ್ಲವೆಂದು ಹೇಳಿದ್ದರು, ಈಗಲೂ ಕೂಡ ನಾವು ಕಳಂಕಿತರನ್ನು ಮಂತ್ರಿಯನ್ನಾಗಿ ಮಾಡಿಕೊಂಡಿರುವುದಿಲ್ಲ. ಈಗಲೂ ಕೂಡ ಯಾರೂ ಕಳಂಕಿತರಿಲ್ಲ. ಡಿ–ನೋಟಿಫಿಕೇಶನ್ ಬಗ್ಗೆ ಶ್ರೀ ಡಿ.ಕೆ. ಶಿವಕುಮಾರ್ ಮೇಲೆ ಒಂದು ದೂರು ಇತ್ತು. ಅದರ ಮೇಲೆ charge-sheet ಆಗಿತ್ತು, ಅದರ ಮೇಲೆ ಅದಕ್ಕೆ ಸ್ಟೇ ಆಗಿದೆ. ರೋಷನ್ ಬೇಗ್ ಮೇಲೆ ಒಂದು ಪ್ರೈವೇಟ್ ಕಂಪ್ಲೇಂಟ್ ಇದೆ, ಅದರ ಮೇಲೆ FIR ಆಗಿದೆ ಅಷ್ಟೇ. ಇನ್ನೂ charge-sheet ಆಗಿಲ್ಲ. ಹಾಗಿದ್ದ ಮೇಲೆ ಅವರನ್ನು ಕಳಂಕಿತರೆಂದು ಕರೆಯುವುದಕ್ಕೆ ಬರುವುದಿಲ್ಲ. ಹಾಗಾಗಿ ನಾವು High Command ನವರ ಜೊತೆಯಲ್ಲಿ ಚರ್ಚೆ ಮಾಡಿ ಅವರಿಬ್ಬರನ್ನು ಕೂಡ ತೆಗೆದುಕೊಂಡಿದ್ದೇವೆ, ಈ ಹಿಂದೆ ಅವರನ್ನು ಕಳಂಕಿತರೆನ್ನುವ ಕಾರಣಕ್ಕಾಗಿ ತೆಗೆದುಕೊಂಡಿಲ್ಲವೆಂದು ಅಲ್ಲ. ಏನು ಮಾಡುತ್ತಿದ್ದಾರೆಂದರೆ, confusion ಅನ್ನು create ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಸಂತೋಷ್ ಲಾಡ್ ಮೇಲೆ ಆರೋಪಗಳು ಬಂದವು. ಹಿರೇಮಠ ಮತ್ತು ಇನ್ನೊಬ್ಬರು ಆರೋಪ ಮಾಡಿದರು, ಸಂತೋಷ್ ಲಾಡ್ ಮೇಲೆ ಯಾವುದೇ FIR ಆಗಲಿ ಅಥವಾ charge-sheet ಆಗಲಿ ಆಗಿಲ್ಲ. ನಾನು ಅದಕ್ಕೋಸ್ಕರವಾಗಿ ಅವರ ಮೇಲೆ ಆರೋಪ ಇಲ್ಲ, charge-sheet ಇಲ್ಲ, ಅವರು ಕಳಂಕಿತರಲ್ಲವೆಂದು ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೆ. ಆದರೂ ಸಂತೋಷ್ ಲಾಡ್ ಅವರೇ ಸ್ವಯಂಪ್ರೇರಣೆಯಿಂದ ರಾಜೀನಾಮೆ ಕೊಟ್ಟರು. ಓ ಎಂದು ಏಕೆ ಅನ್ನುತ್ತಿದ್ದೀರಿ? It is a fact. ನಿಮಗೆ ಗೊತ್ತಿಲ್ಲದಿದ್ದರೆ ತಿಳಿದುಕೊಳ್ಳಿ, ಓ ಎಂದರೆ ನಿಮಗೆ ಏನು ಗೊತ್ತು? ಗೊತ್ತಾ ನಿಮಗೆ? ಗೊತ್ತಿಲ್ಲದೆ ಸುಮ್ಮನೆ ಏಕೆ ಹೇಳುತೀರಿ? ಆದ್ದರಿಂದ ಪತ್ರಿಕೆಯಲ್ಲಿ ಮತ್ತು ಟಿ.ವಿ. ಮಾಧ್ಯಮದಲ್ಲಿ ಬರತಕ್ಕಂಥದ್ದು ಸತ್ಯವಾಗುವುದಿಲ್ಲ. ಸತ್ಯವೂ ಇರಬಹುದು, ಅಸತ್ಯವೂ ಇರಬಹುದು. ಆದರೆ ವಸ್ತುಸ್ಥಿತಿ ಏನೆಂದರೆ, ಅವರೇ ಸ್ವಯಂಪ್ರೇರಣೆಯಿಂದ ರಾಜೀನಾಮೆ ಕೊಟ್ಟರು. ನನ್ನಿಂದ ಸರ್ಕಾರಕ್ಕೆ ಯಾವುದೇ ಮುಜುಗುರ ಆಗಬಾರದು, ಆ ಕಾರಣಕ್ಕೋಸ್ಕರವಾಗಿ ನಾನು ರಾಜೀನಾಮೆ

ಕೊಡುತ್ತಿದ್ದೇನೆಂದು ಅವರೇ ಸ್ವಯಂಪ್ರೇರಣೆಯಿಂದ ಕೊಟ್ಟಿರುವುದು. ಆ ಕಾರಣದಿಂದ ಅವರ ರಾಜೀನಾಮೆ ತೆಗೆದುಕೊಂಡು ಬಿಟ್ಟರು, ಇವರನ್ನು ಸೇರಿಸಿಕೊಂಡು ಬಿಟ್ಟರು ಎಂದು ದಿನಾಲೂ ಪತ್ರಿಕೆಯಲ್ಲಿ ಮತ್ತು ಟಿ.ವಿ. ಮಾಧ್ಯಮಗಳಲ್ಲಿ ಚರ್ಚೆಯಾಗುವುದು ಮತ್ತು ಪ್ರಚಾರ ಆಗತಕ್ಕಂಥದ್ದು, ಅದಕ್ಕಾಗಿ ಇವರದು ಬೇರೆ ಅದು ಬೇರೆ ಎಂದು ನಾನು ಹೇಳಿದ್ದೇನೆ. ಈಗಲೂ ಕೂಡ ಅದನ್ನು ಕ್ಲಾರಿಫೈ ಮಾಡಲಿಕ್ಕೆ ಬಯಸುತ್ತಿದ್ದೇನೆ. ಗೊತ್ತಿಲ್ಲದಿದ್ದರೆ ಗೊತ್ತಾಗಲಿ ಎನ್ನುವ ಕಾರಣಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. ನಾನೂ ಕೂಡ 30 ವರ್ಷದಿಂದ ರಾಜಕಾರಣದಲ್ಲಿದ್ದೇನೆ. 1983 ರಿಂದ ಶಾಸಕನಾಗಿ, ಮಂತ್ರಿಯಾಗಿದ್ದು ಈ ಬಾರಿ ಶಾಸಕನಾಗಿದ್ದೇನೆ. ಇವತ್ತಿನವರೆಗೂ ಕೈ, ಬಾಯಿ ಶುದ್ಧವಾಗಿಟ್ಟುಕೊಂಡು ಮಾನ ಮರ್ಯಾದೆ ಇಟ್ಟುಕೊಂಡು ರಾಜಕೀಯ ಮಾಡಿಕೊಂಡು ಬಂದಿದ್ದೇನೆ. ಸ್ವಾಭಿಮಾನದಿಂದ ರಾಜಕೀಯ ಮಾಡಿಕೊಂಡು ಬಂದಿದ್ದೇನೆ. ಅನೇಕ ಸಾರಿ ಸ್ವಾಭಿಮಾನಕ್ಕೆ ಧಕ್ಕೆ ಆದಾಗ ರಾಜೀನಾಮೆ ಕೊಟ್ಟು ಬಂದಿದ್ದೇನೆ. ಮಂತ್ರಿ ಕೆಲಸಕ್ಕೆ 3–4 ಬಾರಿ ರಾಜೀನಾಮೆ ಕೊಟ್ಟಿದ್ದೇನೆ. ಆದ್ದರಿಂದ ಸ್ವಾಭಿಮಾನಕ್ಕೆ ಧಕ್ಕೆ ಮಾಡಿಕೊಂಡು, ಅಗೌರವ ಮಾಡಿಕೊಂಡು ರಾಜಕಾರಣ ಮಾಡಬೇಕಾದಂತಹ ಅಗತ್ಯ ಇಲ್ಲ. ಬಸವರಾಜ ಬೊಮ್ಮಾಯಿಯವರೆ, ಇದು ನಿಮಗೂ ಗೊತ್ತಿದೆ. You are also aware of this.

ಶ್ರೀ ಬಸವರಾಜ ಬೊಮ್ಮಾಯಿ: ನಮಗೆ ಭಯ ಆಗುತ್ತಿದೆ.

ಶ್ರೀ ಸಿದ್ದರಾಮಯ್ಯ: ಭಯ ಏನೂ ಇಟ್ಟುಕೊಳ್ಳಬೇಕಾಗಿಲ್ಲ. ನೀವು ಬಿಜೆಪಿಗೆ ಹೋಗಿರುವುದರಿಂದ ನಿಮಗೆ ಈ ರೀತಿಯ ಭಯ ಶುರುವಾಗಿ ಬಿಟ್ಟಿದೆ.

ಶ್ರೀ ಬಸವರಾಜ ಬೊಮ್ಮಾಯಿ: ನೀವು 3–4 ಸಲ ರಾಜೀನಾಮೆ ಕೊಟ್ಟೆ ಎಂದು ಹೇಳಿದಿರಿ. ಅದೇ ಭಯ ನನಗೆ ಕಾಡುತ್ತಿರುವುದು. ಮುಂದೆ ಹಾಗೆ ಮಾಡಬೇಡಿ. ಅಂತಹ ಪ್ರಸಂಗ ಬಂದೇ ಬರುತ್ತದೆ. ಆಗ ಸ್ವಲ್ಪ ಕಷ್ಟ ಆದೀತು ಎಂದು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಗೊತ್ತಿದ್ದು ಅವೆಲ್ಲಾ ಏಕೆ ಮಾತನಾಡುತ್ತಿದ್ದೀರಿ? ಅಂತಹ ಸನ್ನಿವೇಶ ಇರುವುದಿಲ್ಲ. ಸ್ವಾಭಿಮಾನ ಕಾಪಾಡಿಕೊಂಡು ನಾನು ಎಲ್ಲಿಯವರೆಗೆ ರಾಜಕಾರಣದಲ್ಲಿರುತ್ತೇನೆ ಅಲ್ಲಿಯವರೆಗೆ ಕೂಡ ಅದನ್ನು ಉಳಿಸಿಕೊಂಡು ರಾಜಕಾರಣ ಮಾಡುತ್ತೇನೆಂದು ತಮಗೆ ಬಹಳ ಸ್ಪಷ್ಟವಾಗಿ ತಿಳಿಸುವುದಕ್ಕೆ ಬಯಸುತ್ತೇನೆ. ಅದರ ಬಗ್ಗೆ ಯಾರೂ ಸಂಶಯ ಇಟ್ಟುಕೊಳ್ಳಬೇಕಾದ ಅಗತ್ಯತೆ ಇಲ್ಲ. ಹೆದರಿಕೆಯನ್ನು ಇಟ್ಟುಕೊಳ್ಳಬೇಕಾದಂಥ ಅಗತ್ಯವೂ ಇಲ್ಲ. ಅದರ ಬಗ್ಗೆ ಭಯ ಇಟ್ಟುಕೊಳ್ಳಬೇಕಾದಂಥ ಅಗತ್ಯವೂ ಇಲ್ಲ. ಇದು ಬಸವರಾಜ ಬೊಮ್ಮಾಯಿಯವರಿಗೂ ಗೊತ್ತಿದೆ, because he Knows me very well. ನಾವು ಜೊತೆಯಲ್ಲಿ ಇದ್ದವರಲ್ಲವೇ? ಏನೇನು ಘಟನೆಗಳು ಆಗಿವೆ ಎನ್ನುವುದು ಅವರಿಗೆ ಗೊತ್ತಿದೆ. ಗೊತ್ತಿದ್ದೂ ಕೂಡ ಅದನ್ನು ಹೇಳಿದರೆ ಪ್ರಯೋಜನವಾಗುವುದಿಲ್ಲ. ಅದನ್ನು ಅಷ್ಟಕ್ಕೇ ನಿಲ್ಲಿಸಿ ಬಿಡೋಣ. ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಕೆಟ್ಟು ಹೋಗಿದೆ, ತೆರಿಗೆ ಸಂಗ್ರಹ ಎಲ್ಲಾ ಕಡಿಮೆ ಆಗಿ ಬಿಟ್ಟಿದೆ. Plan achievement ಕೂಡ ಕಡಿಮೆ ಆಗುತ್ತಿದೆ, ಅಭಿವೃದ್ಧಿ ಎಲ್ಲಾ ಕುಂಠಿತವಾಗಿ ಬಿಡುತ್ತದೆ, ನಾವು ಇದನ್ನು ನಿರೀಕ್ಷೆ ಮಾಡಿರಲಿಲ್ಲ, ನಮ್ಮ ಕಾಲದಲ್ಲಿ ಬಹಳ ಚೆನ್ನಾಗಿತ್ತು ಎಂದು ಹೇಳಿದರು. ಇದಕ್ಕೆ ಬಸವರಾಜ ರಾಯರೆಡ್ಡಿಯವರು ಸಾಕಷ್ಟು ಉತ್ತರವನ್ನು ಕೊಟ್ಟಿದ್ದಾರೆ. ಹಣಕಾಸಿನ ಬಗ್ಗೆ ಬಹಳಷ್ಟು ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಬಹಳ ಉತ್ತಮವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಾವು ರಾಜ್ಯದಲ್ಲಿ 62,464 ಕೋಟಿ ₹ ಗಳ ಸ್ವಂತ ತೆರಿಗೆಯನ್ನು, from our own resources, ಸಂಗ್ರಹ ಮಾಡುತ್ತೇವೆಂದು ಹೇಳಿದ್ದೇವೆ. ನಾವು ಅಧಿಕಾರಕ್ಕೆ 13ನೇ ಮೇ 2013 ರಲ್ಲಿ ಬಂದಿರುವುದು. ನಾನು ಬಜೆಟ್ ಮಂಡಿಸಿರುವುದು ಜುಲೈ ತಿಂಗಳಲ್ಲಿ, ಬಜೆಟ್ ಪಾಸಾಗಿರುವುದು ಜುಲೈ ಕೊನೆಯಲ್ಲಿ. ನಮ್ಮ ಬಜೆಟ್ ಆಗಸ್ಟ್ ತಿಂಗಳಿನಿಂದ ಜಾರಿಗೆ ಬರುವುದಕ್ಕೆ ಪ್ರಾರಂಭವಾಗಿರುತ್ತದೆ. ಅದು Revised Budget. ನಾವು ಸಿಕ್ಕಿರುವಂತಹ ಅವಧಿಯಲ್ಲಿ, ಮಾನ್ಯ ಜಗದೀಶ್ ಶೆಟ್ಟರ್‌ರವರ out-going Government ಏನು ಫೆಬ್ರವರಿ ತಿಂಗಳಿನಲ್ಲಿ ಬಜೆಟ್ ಮಂಡಿಸಿದ್ದರು ಅದಕ್ಕಿಂಥ ಹೆಚ್ಚಿಗೆ ಎಲ್ಲಾ tax ಗಳನ್ನು ಹೆಚ್ಚು ಮಾಡುವಂಥದ್ದನ್ನು ಮಾಡಿದ್ದೇವೆ. Plan size ಕೂಡ ಹೆಚ್ಚಿಗೆ

ಮಾಡಿದ್ದೇವೆ. ಫೆಬ್ರವರಿ ಬಜೆಟ್‌ನಲ್ಲಿ Commercial Tax 37,000 ಕೋಟಿ ರೂ.ಗಳು ಎಂದು ಹೇಳಿದ್ದರು. ನಾನು ಜುಲೈನಲ್ಲಿ ಬಜೆಟ್ ಮಂಡಿಸುವಾಗ ಅದನ್ನು 37,740 ಕೋಟಿ ರೂ.ಗಳು, ಅಂದರೆ 2% ಹೆಚ್ಚಿಗೆ ಮಾಡಿದ್ದೇನೆ. State Excise ನಲ್ಲಿ 12,400 ಕೋಟಿ ರೂ.ಗಳು ಹೇಳಿದ್ದರು. ಅದನ್ನು 12,600 ಕೋಟಿ ರೂ.ಗಳು ಅಂದರೆ 200 ಕೋಟಿ ರೂ.ಗಳನ್ನು ಹೆಚ್ಚಿಗೆ ಮಾಡಿದ್ದೇವೆ. Motor vehicles ನಲ್ಲಿ 4,008 ಕೋಟಿ ರೂ.ಗಳನ್ನು ಮಾಡಿದ್ದರು. ನಾವು 4,120 ಕೋಟಿ ರೂ.ಗಳನ್ನು ಮಾಡಿದ್ದೇವೆ. Target ಹೆಚ್ಚಿಗೆ ಮಾಡಿದ್ದೇವೆ. Stamps and Registration ನಲ್ಲಿಯೂ ಕೂಡ 6,100 ಕೋಟಿ ರೂ.ಗಳ Target ಇಟ್ಟುಕೊಂಡಿದ್ದರು. ಅದನ್ನು 6,500 ಕೋಟಿ ರೂ.ಗಳನ್ನು ಮಾಡಿದ್ದೇವೆ. ಹಾಗಾಗಿ ಸುಮಾರು ಒಂದೂವರೆ ಸಾವಿರ ಕೋಟಿ ರೂ.ಗಳು, ಇವರು ಫೆಬ್ರವರಿಯಲ್ಲಿ ಮಂಡಿಸಿದ ಬಜೆಟ್‌ಗೂ ನಾನು ಮಂಡಿಸಿದ ಬಜೆಟ್‌ಗೂ ತೆರಿಗೆ ಸಂಗ್ರಹದಲ್ಲಿ ಹೆಚ್ಚಿಗೆ ಮಾಡಿದ್ದೇವೆ. ಅದು ಒಂದು ಕಾರಣ. ಈ 9 ತಿಂಗಳಿನಲ್ಲಿ ಡಿಸೆಂಬರ್ ಕೊನೆಯವರೆಗೆ ನಾವು 69% ರಷ್ಟು ತೆರಿಗೆಯನ್ನು ವಸೂಲಿ ಮಾಡಿದ್ದೇವೆ. ಕಡಿಮೆ ಅವಧಿ ಇದ್ದರೂ ಕೂಡ ಕಡಿಮೆ ಅವಧಿಯಲ್ಲಿ ಹೆಚ್ಚು ತೆರಿಗೆ ವಸೂಲಿ ಮಾಡಲು ಏನು ಪ್ರಯತ್ನಗಳನ್ನು ಮಾಡಬೇಕೋ ಆ ಪ್ರಯತ್ನಗಳನ್ನು ಮಾಡಿದ್ದೇವೆ. ಈ 9 ತಿಂಗಳಿನಲ್ಲಿ 42,947 ಕೋಟಿ ರೂ.ಗಳ ತೆರಿಗೆಯನ್ನು ವಸೂಲಿ ಮಾಡಿದ್ದೇವೆ. 62,464 ಕೋಟಿ ರೂ.ಗಳಿಗೆ 42,947 ಕೋಟಿ ರೂ.ಗಳ ತೆರಿಗೆ ವಸೂಲಿ ಮಾಡಿದ್ದೇವೆ. ಇದೇ ಅವಧಿಯಲ್ಲಿ 2012–13 ರಲ್ಲಿ ಇವರು ಅಧಿಕಾರದಲ್ಲಿದ್ದಾಗ 38,544 ಕೋಟಿ ರೂ.ಗಳು ಆಗಿತ್ತು. ನಮ್ಮದು 42,967 ಕೋಟಿ ರೂ.ಗಳು. ಅಂದರೆ ಶೇ.11 ರಷ್ಟು ಹೆಚ್ಚಳವಾಗಿದೆ. ತೆರಿಗೆಯಲ್ಲಿ ಸೋರಿಕೆಯಾಗಿದೆ, ತೆರಿಗೆ ವಸೂಲು ಆಗುತ್ತಿಲ್ಲ. ತೆರಿಗೆ ವಸೂಲಾತಿ ಮಾಡಿಲ್ಲ ಎನ್ನುವುದರಲ್ಲಿ ಸತ್ಯಾಂಶವಿಲ್ಲ ಎಂದು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನೂ ಮೂರು ತಿಂಗಳು ಇದೆ. ಇನ್ನು ಉಳಿದದ್ದನ್ನು ಈ ಮೂರು ತಿಂಗಳಿನಲ್ಲಿ ವಸೂಲಿ ಮಾಡಿ ನಾವು ಏನು 62,464 ಕೋಟಿ ರೂ.ಗಳ ತೆರಿಗೆ ವಸೂಲಾತಿ ಗುರಿ ಇಟ್ಟುಕೊಂಡಿದ್ದೇವೆ ಅದನ್ನು ತಲುಪುತ್ತೇವೆ ಎನ್ನುವ ಸಂಪೂರ್ಣವಾದಂತಹ ವಿಶ್ವಾಸವಿದೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

ಯೋಜನಾ ವೆಚ್ಚದ ಬಗ್ಗೆ ಹೇಳುವುದಾದರೆ, ಈ ವರ್ಷ ಯೋಜನಾ ವೆಚ್ಚ 50,487 ಕೋಟಿ ರೂ.ಗಳು ಆಗಿದ್ದು, ಇದರಲ್ಲಿ ಇಲ್ಲಿಯವರೆಗೂ ಅಂದರೆ 9 ತಿಂಗಳಿನವರೆಗೂ 47% ಖರ್ಚಾಗಿದೆ. ಇನ್ನು ಮೂರು ತಿಂಗಳಿನಲ್ಲಿ ಉಳಿದ ಯೋಜನಾ ಹಣ ಏನು ಉಳಿದಿದೆ ಅದನ್ನು ಖರ್ಚು ಮಾಡಲು ಪ್ರಯತ್ನ ಮಾಡುತ್ತೇವೆ. ಇದರಲ್ಲಿ ಹಣ ಏಕೆ ಕಡಿಮೆ ಆಗಿದೆ ಎಂದರೆ, ನಾವು ಬಜೆಟ್ ಮಂಡಿಸಿದ್ದೇ ಜುಲೈ ತಿಂಗಳಿನಲ್ಲಿ. ಆಗಸ್ಟ್ ತಿಂಗಳಿನಿಂದ ಕಾರ್ಯಕ್ರಮಗಳು ಜಾರಿಯಾಗುವುದಕ್ಕೆ ಪ್ರಾರಂಭವಾದವು, ಹಾಗಾಗಿ ಸ್ವಲ್ಪ ಉಳಿದಿದೆ. ಅದನ್ನು ಖರ್ಚು ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. 2012–13 ರಲ್ಲಿ ಮೊದಲ 9 ತಿಂಗಳಿನಲ್ಲಿ ಇವರ plan ನಲ್ಲಿ 20,239 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ನಾವು 2013–14 ರಲ್ಲಿ 24,105 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಅಂದರೆ ಸುಮಾರು 4,000 ಕೋಟಿ ರೂ.ಗಳನ್ನು ಹೆಚ್ಚಿಗೆ ಖರ್ಚು ಮಾಡಿದ್ದೇವೆ. Percentage-wise ಸ್ವಲ್ಪ ಕಡಿಮೆ ಇದೆ ಅಷ್ಟೇ, ಆದರೆ ನಾವು ಒಟ್ಟು ಹಣ ಖರ್ಚು ಮಾಡಿರುವುದನ್ನು ನೋಡಿದರೆ, ಅವರು 20,239 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ನಾವು 24,105 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಹಾಗಾಗಿ ಶೇ.47 ರಷ್ಟು ಆಗಿದೆ. ಮುಂದಿನ ಮೂರು ತಿಂಗಳಿನಲ್ಲಿ ನಾವು plan size ಅನ್ನು reach ಆಗಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ.

ಯೋಜನೇತರ, ಅಲ್ಲಿಯೂ ಕೂಡ ಇವರು 9 ತಿಂಗಳಿನಲ್ಲಿ ಡಿಸೆಂಬರ್ ಕೊನೆಯವರೆಗೆ 37,196 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದರು. ನಾವು 41,152 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಅಂದರೆ ಯೋಜನೇತರ ವೆಚ್ಚದಲ್ಲಿ 11%. ಅದನ್ನು ನಿಯಂತ್ರಣ ಮಾಡಲು ಎಷ್ಟು ಸಾಧ್ಯವಾಗುತ್ತದೆ ಆ ನಿಯಂತ್ರಣ ಮಾಡುವಂತಹ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ: ನನಗೆ ಇರುವ ಮಾಹಿತಿ ಪ್ರಕಾರ ಯೋಜನಾ ವೆಚ್ಚ ಡಿಸೆಂಬರ್ ಕೊನೆಯಲ್ಲಿ ಹಿಂದಿನ ಸರ್ಕಾರದ್ದು 52%, ನಿಮ್ಮ ಸರ್ಕಾರದ್ದು 47% ಆಗಿದೆ. ಸ್ವಲ್ಪ ಮಾಹಿತಿ ತೆಗೆದು ನೋಡಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: Plan size ನಾಲ್ಕೂವರೆ ಸಾವಿರ ಕೋಟಿ ರೂ.ಗಳನ್ನು ಜಾಸ್ತಿ ಮಾಡಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ನಾನು plan size ಬಗ್ಗೆ ಹೇಳುತ್ತಿದ್ದೇನೆ. Percentage ಅಂದರೆ ಕಡಿಮೆಯಾಗುತ್ತದೆಯೇ? ನಮ್ಮದು 52% ಆಗಿದೆ. ನಿಮ್ಮದು 47%.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: Plan size ಹೆಚ್ಚು ಆಯಿತು.

ಶ್ರೀ ಸಿದ್ದರಾಮಯ್ಯ: ನಾವು plan size ಹೆಚ್ಚು ಮಾಡಿದೆವು. ಮಾನ್ಯ ಜಗದೀಶ್ ಶೆಟ್ಟರ್‌ರವರು ಮಂಡಿಸಿದ್ದು 46,000 ಚಿಲ್ಲರೆ ಕೋಟಿ ರೂ.ಗಳು. ನಮ್ಮದು 50,000 ಚಿಲ್ಲರೆ ಕೋಟಿ ರೂ.ಗಳು.

ಶ್ರೀ ಜಗದೀಶ್ ಶೆಟ್ಟರ್: Percentage ಮೇಲೆ ಲೆಕ್ಕಾಚಾರ ಮಾಡಿ.

ಶ್ರೀ ಸಿದ್ದರಾಮಯ್ಯ: I am not misleading the House. It is a fact that, ನಿಮ್ಮ ಸರ್ಕಾರದ ಅವಧಿಯಲ್ಲಿ 50% ಗಿಂತ ಜಾಸ್ತಿಯಾಗಿತ್ತು. ನಮ್ಮದು 47% ಇದೆ. ಖರ್ಚು ಮಾಡಲಿಕ್ಕೆ ನಿಮಗೆ ಪೂರ್ಣ ವರ್ಷ ಸಿಕ್ಕಿತ್ತು. ನಮಗೆ ಸಿಕ್ಕಿದ್ದ ಅವಧಿ ಬಹಳ ಕಡಿಮೆ ಇದೆ. ಆದರೂ ನಾವು 47% reach ಆಗಿದ್ದೇವೆ. In terms of total amount ಎಷ್ಟು ಖರ್ಚಾಗಿದೆ ಎಂದರೆ, ನಿಮಗಿಂತ 4,000 ಕೋಟಿ ರೂ.ಗಳನ್ನು ಹೆಚ್ಚು ಖರ್ಚು ಮಾಡಿದ್ದೇವೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಈ percentage ವಿಷಯ ಏನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಮಂತ್ರಿಗಳಾದರೆ ಅರ್ಥವಾಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಉಮೇಶ್ ಕತ್ತಿಯವರೆ, ನಿಮ್ಮ ಅನುಭವ ನೀವು ಹೇಳಬೇಕು. ನನಗೇನು ಗೊತ್ತಿದೆ? ನೀವೆಲ್ಲಾ experts.

ಶ್ರೀ ಆರ್.ಜಗದೀಶ್ ಕುಮಾರ್: ಮಾನ್ಯ ಮುಖ್ಯಮಂತ್ರಿಯವರೆ, ಒಂದು ನಿಮಿಷ ತಾವು convince ಮಾಡುವಾಗ, convincing figures ಹೇಳುವಾಗ, ಯಾವಾಗ ಯಾವಾಗ ತಮಗೆ convenient ಆಗಿದೆಯೋ ಆಗ figures ಹೇಳಿ. ಯಾವಾಗ ಯಾವಾಗ ತಮಗೆ convenient ಆಗಿದೆಯೋ ಆಗ percentages ಹೇಳಿ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ: ನಾನು ತಮ್ಮ ಸಲಹೆಯನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ನಾವು Non-plan expenditure ಅನ್ನು ಆದಷ್ಟು ಕಡಿಮೆ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. Plan expenditure ಅನ್ನು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆ ಮೂಲಕ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚು ಹಣವನ್ನು ಕೊಡುವಂತಹ ಪ್ರಯತ್ನ ಮಾಡುತ್ತಿದ್ದೇನ್ನುವಂತಹ ಮಾತುಗಳನ್ನು ಇಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ. ಇದರಿಂದ ತೆರಿಗೆಯು ಬಹಳ ಕಡಿಮೆಯಾಗಿದೆ ಅನ್ನತಕ್ಕಂತಹದ್ದು ಸತ್ಯಕ್ಕೆ ದೂರವಾದುದು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ subsidy portion ಅನ್ನು ಹೆಚ್ಚಾಗಿ ಕೊಡುವುದನ್ನು ಮಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ನಾವು ಅನ್ನಭಾಗ್ಯ ಕಾರ್ಯಕ್ರಮವನ್ನು 2012–13ನೇ ಸಾಲಿನಲ್ಲಿ ಜಾರಿ ಮಾಡಿದ್ದೇವೆ. ಮಾನ್ಯ ಬೋಪಯ್ಯನವರೆ, ತಾವು ಈ ಕಡೆಗೆ ತಿರುಗಿ. ನಾನು ಮಾತನಾಡುವುದನ್ನು ಕೇಳಿ. ಬಿಪಿಎಲ್ ಕಾರ್ಡುದಾರರಿಗೆ ಅಕ್ಕಿಯನ್ನು ಕೊಡುವಂತಹ ಕಾರ್ಯಕ್ರಮಕ್ಕೆ 900 ಕೋಟಿ ರೂಪಾಯಿಗಳು

ಇತ್ತು. ನಾವು ಜುಲೈನಿಂದ ಈ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. ಅಂದರೆ ಸುಮಾರು 9 ತಿಂಗಳು ಆಗಿದೆ, ಒಟ್ಟು ಒಂದು ವರ್ಷಕ್ಕೆ ಆಯವ್ಯಯದಲ್ಲಿ 3400 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ 900 ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ. ನಾವು 3400 ಕೋಟಿ ರೂಪಾಯಿಗಳನ್ನಿಟ್ಟಿದ್ದೇವೆ. ನಾವು 9 ತಿಂಗಳಿಗೆ ಮಾತ್ರ subsidyಯನ್ನು ಕೊಟ್ಟಿದ್ದೇವೆ. ಮುಂದಿನ ವರ್ಷಕ್ಕೆ 4,500 ಕೋಟಿ ರೂಪಾಯಿಗಳನ್ನು ಇಡುತ್ತಿದ್ದೇವೆ ತಾವು ಇದನ್ನು ಒಪ್ಪಿಕೊಳ್ಳುತ್ತಿರೋ ಇಲ್ಲವೋ?

ಶ್ರೀ ಕೆ.ಜಿ. ಬೋಪಯ್ಯ: ನೀವು ಖರ್ಚು ಮಾಡಿದ ಮೇಲೆ ಈ ಬಗ್ಗೆ ಹೇಳಿ.

ಶ್ರೀ ಸಿದ್ದರಾಮಯ್ಯ: ಇಲ್ಲಿಟ್ಟಿರುವ ಹಣವು ಖರ್ಚು ಆಗುತ್ತದೆ. ಈ ಹಣವು ಖರ್ಚಾಗದೇ ಉಳಿಯುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಕೆ.ಜಿ. ಬೋಪಯ್ಯ: ಲೋಕೋಪಯೋಗಿ ಇಲಾಖೆಯ ಬಗ್ಗೆಯೂ ಸ್ವಲ್ಪ ಹೇಳಿ.

ಶ್ರೀ ಸಿದ್ದರಾಮಯ್ಯ: ಅದನ್ನು ಹೇಳುತ್ತೇನೆ, ತಾವು ಕುಳಿತುಕೊಳ್ಳಿ. ಇವೆಲ್ಲವನ್ನೂ ನೀವು ಇಟ್ಟುಬಿಟ್ಟು ಹೋಗಿದ್ದೀರಿ. ನಿಮಗೆ ಬಾಕಿ ಎಲ್ಲಿಂದ ಬಂತು, ನಿಮಗೆ pending bills ಎಲ್ಲಿಂದ ಬಂತು ಎಂದು ಹೇಳಿ ಸ್ವಲ್ಪ. PWDನಲ್ಲಿ pending bills ಉಳಿದುಕೊಂಡಿದ್ದರೆ ಇದಕ್ಕೆ ಯಾರು ಕಾರಣ?

ಶ್ರೀ ಕೆ.ಜಿ. ಬೋಪಯ್ಯ: ಹಾಸ್ಟೆಲ್‌ಗಳಲ್ಲಿ ಪ್ರವೇಶ ಸಿಗದ ವಿದ್ಯಾರ್ಥಿಗಳಿಗೆ ಸುಮಾರು 1500 ರೂಪಾಯಿಯನ್ನು ಕೊಡುತ್ತೀರೆಂದು ಹೇಳಿದ್ದೀರಿ. ಅದನ್ನು ಈ ವರ್ಷ ಇಲ್ಲ ಅದನ್ನು ಮುಂದಿನ ವರ್ಷ ಕೊಡುತ್ತಾರೆಂದು ಹೇಳಿದ್ದಾರಲ್ಲ. ಮುಂದಿನ ವರ್ಷ ಕೊಡುವುದಕ್ಕೆ ಕಳೆದ ಬಜೆಟ್‌ನಲ್ಲಿ announce ಮಾಡಬೇಕಾ? ಏಕೆ?

ಶ್ರೀ ಸಿದ್ದರಾಮಯ್ಯ: ಹಾಸ್ಟೆಲ್ ವಿಷಯ ಬಿಡಿ. ನಾನು ಈ ಬಗ್ಗೆ ಹೇಳುತ್ತೇನೆ. ತಾವು ಕುಳಿತುಕೊಳ್ಳಿ.

ಅಧ್ಯಕ್ಷರು: ಮುಖ್ಯಮಂತ್ರಿಯವರು ಉತ್ತರವನ್ನು ಹೇಳುವುದಕ್ಕೆ ಅವಕಾಶವನ್ನು ಕೊಡಬೇಕು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಅನ್ನಭಾಗ್ಯ ಯೋಜನೆಯನ್ನು ತಂದಿರುವುದು ಅದನ್ನು ನಾವು ಮೆಚ್ಚಿಕೊಳ್ಳಬೇಕಾದ ಕಾರ್ಯಕ್ರಮವಾಗಿದೆ. ಇಲ್ಲಿ pressನವರನ್ನು ಒಂದು ಮಾತು ಕೇಳಿದೆ. APL Card-holders ಯಾರು ಇದ್ದರು ಅವರಿಗೆ 8 ರೂಪಾಯಿ ಆಥವಾ 9 ರೂಪಾಯಿಗೊ ಕೇಂದ್ರ ಸರ್ಕಾರದವರು ಅಕ್ಕಿಯನ್ನು ಕೊಡುತ್ತಿದ್ದರು. ಇವರಿಗೆ ಕೊಡತಕ್ಕಂತಹ ಕಾರ್ಯಕ್ರಮಕ್ಕೆ 30 ರೂವಾಯಿಗೆ ಅಕ್ಕಿಯನ್ನು ಕೊಡುವುದಕ್ಕೆ ಹೋಗಿ ನೀವು ಎಪಿಎಲ್ ಕಾರ್ಡುದಾರರನ್ನು ಕಿತ್ತುಹಾಕಿದ್ದಾರಲ್ಲಾ ನೀವು ಅವರಿಗೆ ಅನ್ಯಾಯವನ್ನು ಮಾಡಿದ್ದೀರಲ್ಲಾ, ಇದರಲ್ಲಿ ಅವರನ್ನು ಏತಕ್ಕಾಗಿ ಬಿಟ್ಟು ಬಿಟ್ಟಿದ್ದೀರಿ? ಇದರಲ್ಲಿ ಅವರನ್ನೂ ಸಹ ಸೇರಿಸಿಕೊಂಡುಬಿಡಿ, ಕೇಂದ್ರ ಸರ್ಕಾರವು ಎಪಿಎಲ್ ಕಾರ್ಡುದಾರರಿಗೆ ಅಕ್ಕಿಯನ್ನು ಕೊಡುವಂತಹ ಕಾರ್ಯಕ್ರಮವಾಗಿದೆ. ಈ ಬಗ್ಗೆಯೂ ಸಹ ತಾವು ಹೇಳಿಬಿಡಿ.

ಶ್ರೀ ಸಿದ್ದರಾಮಯ್ಯ: ಇದನ್ನು ನಾವು ಬಿಡಲಿಲ್ಲ. ಇವರು ಮಾರ್ಚಿನಲ್ಲಿಯೇ ನಿಲ್ಲಿಸಿಬಿಟ್ಟಿದ್ದರು. ಇದನ್ನು ನಾವು ನಿಲ್ಲಿಸಿದ್ದಲ್ಲಾ. ಹಿಂದಿನ ಸರ್ಕಾರವೇ ಮಾರ್ಚ್ ತಿಂಗಳಿನಲ್ಲಿ ಎಪಿಎಲ್ ಕಾರ್ಡುದಾರರಿಗೆ ಅಕ್ಕಿ ಕೊಡುವುದನ್ನು ನಿಲ್ಲಿಸಿಬಿಟ್ಟಿದ್ದರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಮುಖ್ಯಮಂತ್ರಿಯವರೆ, ಮಾನ್ಯ ಯಡಿಯೂರಪ್ಪನವರು ಎಪಿಎಲ್ ಕಾರ್ಡುನವರ ಬಗ್ಗೆ 24 ದಿವಸಗಳ ಕಾಲ ಧರಣಿಯಲ್ಲಿ ಕುಳಿತುಬಿಟ್ಟಿದ್ದರಲ್ಲಾ.

ಶ್ರೀ ಸಿದ್ದರಾಮಯ್ಯ: ನೋಡಿ ಹೀಗೆ ಇವರು ಪ್ರಚಾರಕೋಸ್ಕರ ಮಾಡುತ್ತಾರೆ. ಇವರು ಮಾರ್ಚ್ ತಿಂಗಳಲ್ಲಿ 20 ಸಾವಿರ ಟನ್ ಅಕ್ಕಿಯನ್ನು ಕೊಟ್ಟುಬಿಟ್ಟು ನಿಲ್ಲಿಸಿಬಿಟ್ಟರು. ಏಪ್ರಿಲ್, ಮೇ ನಲ್ಲಿಯೂ ಎಪಿಎಲ್ ಕಾರ್ಡುದಾರರಿಗೆ ಅಕ್ಕಿಯನ್ನು ಕೊಡಲಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನೀವಾದರೂ ಎಪಿಎಲ್ ಕಾರ್ಡುದಾರರಿಗೆ ಅಕ್ಕಿಯನ್ನು ಕೊಡುವುದನ್ನು ಮುಂದುವರಿಸಿ.

ಶ್ರೀ ಸಿದ್ದರಾಮಯ್ಯ: National Food Security ಬಂದ ಮೇಲೆ ಈಗ ಎಪಿಎಲ್ ಕಾರ್ಡುದಾರರಿಗೆ ಅಕ್ಕಿಯನ್ನು ಕೊಡುತ್ತಿಲ್ಲ. ಹಾಲು ಉತ್ಪಾದಕರಿಗೆ ಕೊಡುವ ಪ್ರೋತ್ಸಾಹಧನ ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವಾಗ ಒಂದು ಲೀಟರ್ ಹಾಲಿಗೆ 2 ರೂಪಾಯಿ ಕೊಡುತ್ತಿದ್ದರು, 325 ಕೋಟಿ ರೂಪಾಯಿ ಇಟ್ಟಿದ್ದರು. ನಾವು ನಾಲ್ಕು ರೂಪಾಯಿಗಳ ಪ್ರೋತ್ಸಾಹಧನವನ್ನು ಮಾಡಿದ ಮೇಲೆ ಅದು 818 ಕೋಟಿ ರೂಪಾಯಿಗಳಾಯಿತು. The difference is ₹ 493 crore. ಅಕ್ಕಿಯಲ್ಲಿ difference is 2,200 ಕೋಟಿ ರೂಪಾಯಿಗಳು. ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಸಾಲ ಮನ್ನಾ ಏನು ಮಾಡಿದ್ದೇವೆ ಅದರಿಂದ 1313 ಕೋಟಿ ರೂಪಾಯಿಗಳು ಆಯಿತು. ವಸತಿ ಸಹಾಯಧನವು ಈ ವರ್ಷ 1838 ಕೋಟಿ ರೂಪಾಯಿಗಳು. ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ನೀವು ಬಾಕಿ ಕೊಟ್ಟಿಲ್ಲವೆಂದು ಅವರಿಗೆ disconnect ಮಾಡಿದ್ದೀರಿ. ಅವರೆಲ್ಲರಿಗೂ ಮತ್ತೆ Connection restore ಮಾಡಿ ವಿದ್ಯುಚ್ಛಕ್ತಿ ಕೊಟ್ಟಿದ್ದೇವೆ. ಇದಕ್ಕಾಗಿ KPTCLಗೆ 319 ಕೋಟಿ ರೂಪಾಯಿಗಳ ಮನ್ನಾ ಮಾಡಿದೆವು. ಅಂಗನವಾಡಿ ಮತ್ತು ಶಾಲಾ ಮಕ್ಕಳಿಗೆ ಸುಮಾರು 40 ಲಕ್ಷ ಅಂಗನವಾಡಿ ಮಕ್ಕಳಿಗೆ 61 ಲಕ್ಷ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಇರುವಂತಹ ಶಾಲಾಮಕ್ಕಳು ಅಂದರೆ ಒಂದು ಲಕ್ಷ ಮಕ್ಕಳಿಗೆ ವಾರದಲ್ಲಿ ಮೂರು ದಿನ alternate daysನಲ್ಲಿ 150 ಮಿಲಿಗ್ರಾಂ ಹಾಲನ್ನು ಕೊಡುತ್ತಿದ್ದೇವೆ. ಇದಕ್ಕಾಗಿ 426 ಕೋಟಿ ರೂಪಾಯಿಗಳನ್ನಿಟ್ಟಿದ್ದೇವೆ. ನಮಗೆ ಈ ವರ್ಷ Subsidy burden 6589 ಕೋಟಿ ರೂಪಾಯಿಗಳಾಗುತ್ತದೆ. ಇಷ್ಟೆಲ್ಲಾ burden ಮಾಡಿಯೂ ಸಹ ಇವತ್ತಿನ ದಿವಸ ಅಬಿವೃದ್ಧಿ ಕೆಲಸಕಾರ್ಯಗಳಿಗೆ ಹಣವನ್ನು ಕೊಟ್ಟು ಆರ್ಥಿಕ ಪರಿಸ್ಥಿತಿಯನ್ನು ಶಿಸ್ತಿನಿಂದ ಇಡತಕ್ಕಂತಹ ಪ್ರಯತ್ನವನ್ನು ಮಾಡಿದ್ದೇವೆ. ಇದನ್ನು ನಾವು additional ಆಗಿ ಕೊಟ್ಟಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ: ಹಿಂದುಳಿದ ವರ್ಗದವರಿಗೆ ವಿದ್ಯಾಸಿರಿ ಯೋಜನೆಯನ್ನು ಮಾಡಿದ್ದೀರಿ. ಅದರ ಬಗ್ಗೆ ಏನು ಮಾಡಿದ್ದೀರಿ?

ಶ್ರೀ ಸಿದ್ದರಾಮಯ್ಯ: ಮಾನ್ಯ ಸದಸ್ಯರು ವಿದ್ಯಾಸಿರಿ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಇದೊಂದು ಹೊಸ ಕಾರ್ಯಕ್ರಮವಾಗಿದೆ. ಹಿಂದುಳಿದ ಜಾತಿಯ ಮಕ್ಕಳು ಯಾರು ಕಾಲೇಜಿನಲ್ಲಿ ಓದುತ್ತಿದ್ದಾರೆ ಅವರಿಗೆ ಯಾರಿಗೆ ಹಾಸ್ಟೆಲ್‌ನಲ್ಲಿ ಪ್ರವೇಶಾವಕಾಶ ಇಲ್ಲ, ಅವರಿಗೆ ಸ್ಥಳಾವಕಾಶ ಸಿಗದೆ ಇರುವಂತಹವರಿಗೆ ತಿಂಗಳಿಗೆ 1,500 ರೂಪಾಯಿಯಂತೆ 10 ತಿಂಗಳಿಗೆ 15,000 ರೂಪಾಯಿಗಳನ್ನು ಅವರ ಅಕೌಂಟ್‌ಗೆ ಹಾಕುವುದನ್ನು ಮಾಡಿದ್ದೇವೆ. ಈಗ ಪ್ರವೇಶಕ್ಕಾಗಿ ಅರ್ಜಿಗಳನ್ನು ಕರೆದಿದ್ದಾರೆ. ಈ ವಿದ್ಯಾಸಿರಿ ಪ್ರೋಗ್ರಾಮ್ ಅನ್ನು ಮೆರಿಟ್ ಮೇಲೆ ತೀರ್ಮಾನ ಮಾಡುತ್ತಾರೆ. ಈಗ ಅದನ್ನು ₹ 20,000 ಎಂದು ಮಾಡಿದ್ದೇವೆ. ಮುಂದಿನ ವರ್ಷ ಅದನ್ನು ಹೆಚ್ಚು ಮಾಡುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ: ಈ ವರ್ಷ ಏನೂ ಕೊಡಲಿಲ್ಲವಲ್ಲಾ?

ಶ್ರೀ ಸಿದ್ದರಾಮಯ್ಯ: ಈ ವರ್ಷನೂ ಕೊಡುತ್ತಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ: ಮುಂದಿನ ವರ್ಷ ಕೊಡುತ್ತೇವೆಂದು ಉತ್ತರದಲ್ಲಿ 2014–15ನೇ ಸಾಲು ಇದೆ ಎಂದು ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ: ಇಲ್ಲ. No, No. ಈ ವರ್ಷವೂ ಸಹ ಕೊಡುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ: Starred Questionನಲ್ಲಿ 2014–15ನೇ ಸಾಲಿನಲ್ಲಿ ಕೊಡುತ್ತೇವೆಂದು ಇದೆಯಲ್ಲಾ?

ಶ್ರೀ ಸಿದ್ದರಾಮಯ್ಯ: ಮಧ್ಯ ಮಧ್ಯದಲ್ಲಿ ಎದ್ದು ನಿಂತುಕೊಳ್ಳಬೇಡಿ. ನಾನು yield ಆಗಿಲ್ಲ. ಎಲ್ಲರೂ ಒಟ್ಟಿಗೆ ಎದ್ದು ನಿಂತುಕೊಂಡು ಕೇಳಿದರೆ ಹೇಗೆ? ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಮಾತನಾಡುವಾಗ ಸುಮ್ಮನೆ ಕುಳಿತಿದ್ದೆವು. ವಿದ್ಯಾಸಿರಿ ಕಾರ್ಯಕ್ರಮವು ಈ ವರ್ಷದಿಂದಲೇ ಜಾರಿಯಾಗುತ್ತದೆ. ಅದನ್ನು ಮುಂದಿನ ವಾರದಿಂದ

ಯಾರ್ಯಾರು ಅರ್ಜಿ ಹಾಕಿದ್ದಾರೆ ಅದನ್ನು ಫೈನಲ್ ಮಾಡಿ ಕೊಡುತ್ತೇವೆ. ಇದು ಒಂದು ಹೊಸ ಕಾರ್ಯಕ್ರಮವಾಗಿದೆ. ಅರ್ಜಿಯನ್ನು ಕರೆದು ಅದನ್ನು ಇತ್ಯರ್ಥ ಮಾಡಿ ಈ ವರ್ಷದಿಂದಲೇ ಕೊಡುತ್ತೇವೆ. ನೀವು ಮಧ್ಯದಲ್ಲಿ ಪ್ರಸ್ತಾಪ ಮಾಡಿರುವುದರಿಂದಾಗಿ ನಾನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ರಾಯರೆಡ್ಡಿಯವರು 14ನೇ ಹಣಕಾಸಿನ ಆಯೋಗದ ಬಗ್ಗೆ ಒಂದು ಮಾತನ್ನು ಹೇಳಿದರು. 14ನೇ ಹಣಕಾಸು ಆಯೋಗ ಏನಿದೆ, ಅದರಲ್ಲಿ ಹೈದರಾಬಾದ್ ಕರ್ನಾಟಕ, ಅದಕ್ಕೆ ಹೆಚ್ಚು ಹಣ ಕೇಳಬೇಕೆಂದು ಹೇಳಿದ್ದಾರೆ. ಈಗಾಗಲೇ ನಾವು ಅದನ್ನು ಮಾಡಿದ್ದೇವೆ. ಹೆಚ್ಚು ಹಣವನ್ನು ಕೇಳುವುದಕ್ಕೆ ಮುಂದೆ ಅದನ್ನು ಮಂಡಿಸಿದ್ದೇವೆ. ಮಾನ್ಯ ಅಧ್ಯಕ್ಷರೆ Article 371(J) ಕೇಂದ್ರ ಸರ್ಕಾರ ಸಂವಿಧಾನವನ್ನು ತಿದ್ದುಪಡಿ ಮಾಡಿ .ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಬರತಕ್ಕಂಥ ಬಳ್ಳಾರಿ, ಕೊಪ್ಪಳ, ರಾಯಚೂರು, ಯಾದಗಿರಿ, ಗುಲಬರ್ಗಾ, ಬೀದರ್ ಈ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ಕೊಡಲಿಕ್ಕೆ ಸಂವಿಧಾನದ 371ನೇ ವಿಧಿಯನ್ನು ತಿದ್ದುಪಡಿ ಮಾಡಿ 371(J) ಅನ್ನು ಸೇರ್ಪಡೆ ಮಾಡಿದ್ದಾರೆ. ಇದಕ್ಕೆ ಬಹಳ ವರ್ಷಗಳಿಂದ ಆ ಭಾಗದ ಜನರು ಕೂಡ ಹೋರಾಟ ಮಾಡುತ್ತಿದ್ದರು. ರಾಜ್ಯ ಸರ್ಕಾರ ಕೂಡ ಇದನ್ನು pursue ಮಾಡುತ್ತಿತ್ತು. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಮಾನ್ಯ ಅಡ್ವಾಣಿಯವರು Deputy Prime Minister ಆಗಿದ್ದರು. ರಾಜ್ಯದಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದರು. ಅವರು 2002 ರಲ್ಲಿ ಒಂದು ಪತ್ರವನ್ನು ಬರೆದರು. ಇದನ್ನು ತಿದ್ದುಪಡಿ ಮಾಡಿ ಹೈದರಾಬಾದ್ ಕರ್ನಾಟಕ ಭಾಗದವರಿಗೆ ವಿಶೇಷ ಸ್ಥಾನಮಾನ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಪತ್ರ ಬರೆದರು. ಆದರೆ ಇವತ್ತು ಶ್ರೀ ಮನಮೋಹನ್ ಸಿಂಗ್‌ರವರ ಸರ್ಕಾರ ಸೋನಿಯಾ ಗಾಂಧಿಯವರ ನೇತೃತ್ವದಲ್ಲಿರುವ ಯು.ಪಿ.ಎ. ಸರ್ಕಾರ ಅದಕ್ಕೆ ಒಪ್ಪಿಕೊಂಡು ತಿದ್ದುಪಡಿ ಮಾಡಿ Article-371(J) ಅನ್ನು insert ಮಾಡಿ ಮಾಡಿಕೊಟ್ಟಿದ್ದಾರೆ. ಹಾಗಾಗಿ ನಾನು ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಇದರ ಬಗ್ಗೆ ನಾನು ಸ್ಪಷ್ಟೀಕರಣ ಕೊಡಬಯಸುತ್ತೇನೆ. ಶ್ರೀ ಎಸ್.ಎಂ. ಕೃಷ್ಣರವರ ಸರ್ಕಾರ ಇದ್ದಾಗ ಏನು proposal ಹೋಗಿತ್ತು, ಅದರಲ್ಲಿ ಕೇವಲ ಹೈದರಾಬಾದ್ ಕರ್ನಾಟಕ ಅಷ್ಟೇ ಅಲ್ಲ, ಇನ್ನೂ ಹಿಂದುಳಿದ ತಾಲ್ಲೂಕುಗಳನ್ನು ಅದರಲ್ಲಿ ಸೇರಿಸಿ proposal ಕಳುಹಿಸಿದ್ದರು. ಅದು ಇತ್ತು, ನೀವು ಅದನ್ನು ಬೇಕಾದರೆ verify ಮಾಡಿ. ಇವೆಲ್ಲಾ ಗೊಂದಲಗಳು ಅದರಲ್ಲಿವೆ.

ಶ್ರೀ ಸಿದ್ದರಾಮಯ್ಯ: ಇಲ್ಲ, ಇಲ್ಲ. It is not a fact that...

ಶ್ರೀ ಜಗದೀಶ್ ಶೆಟ್ಟರ್: No, No, ನೀವು verify ಮಾಡಿ.

ಶ್ರೀ ಸಿದ್ದರಾಮಯ್ಯ: ನಾವು ವೆರಿಫೈ ಮಾಡಿಯೇ ಹೇಳುತ್ತಿರುವುದು.

ಶ್ರೀ ಜಗದೀಶ್ ಶೆಟ್ಟರ್: ನಂಜುಂಡಪ್ಪನವರ ವರದಿಯ ಪ್ರಕಾರ ಇನ್ನಿತರ ಕೆಲವು ಹಿಂದುಳಿದ ತಾಲ್ಲೂಕುಗಳು ಇವೆ. ಅವುಗಳನ್ನೂ ಸಹಿತ ಅದರಲ್ಲಿ add ಮಾಡಿ ಕಳುಹಿಸಿದ್ದೀರಿ. ಅದರಲ್ಲಿ ಇವೆಲ್ಲಾ problem ಇವೆ. ಕೇವಲ ಹೈದರಾಬಾದ್ ಕರ್ನಾಟಕ ಅಷ್ಟೇ ಅಲ್ಲ. ಅದರಲ್ಲಿ ಇನ್ನಿತರ ಹಿಂದುಳಿದ ತಾಲ್ಲೂಕುಗಳನ್ನೂ ಸಹ ಆಗ ಸೇರಿಸಿದ್ದರು. ಅದಕ್ಕಾಗಿಯೇ ಆಗ ಆ ಪ್ರಪೋಸಲ್ reject ಆಯಿತು. ನೀವು verify ಮಾಡಿ.

ಶ್ರೀ ಸಿದ್ಧರಾಮಯ್ಯ: ಇಲ್ಲ, ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವು ವೆರಿಫೈ ಮಾಡಿ, ಇದರ ಬಗ್ಗೆ ಸ್ಪಷ್ಟೀಕರಣ ಆಗಬೇಕಾಗುತ್ತದೆ. ಏಕೆಂದರೆ record straight ಆಗಿರಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ: ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಅನವಶ್ಯಕವಾಗಿ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. Allow me to speak. Records ಅನ್ನು ಬೇಕಾದರೆ ನಾನು ಈಗಲೇ ಕೊಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದಕ್ಕೆ ಸ್ಪಷ್ಟೀಕರಣ ಬೇಕಾಗುತ್ತದೆ, ಅಂದು ಯಾವ ರೀತಿ ಪ್ರಪೋಸಲ್ಸ್ ಕಳುಹಿಸಿದ್ದರು ಆ ಲೆಟರ್ ಅನ್ನು ಇಲ್ಲಿ ಇಡಿ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಅವರೇನು ಮಾಡಿದರು? ನಂಜುಂಡಪ್ಪನವರ ವರದಿಯಲ್ಲಿ 114 ತಾಲ್ಲೂಕುಗಳು ಇವೆ, ಆ ರಿಪೋರ್ಟ್ ಬೇರೆ, ಇದು ಹೈದರಾಬಾದ್ ಕರ್ನಾಟಕಕ್ಕೆ ಮೊದಲು ಬಳ್ಳಾರಿ ಇರಲಿಲ್ಲ, ಬಳ್ಳಾರಿಯನ್ನು ಸೇರಿಸಿ ಗುಲಬರ್ಗಾ ಡಿವಿಷನ್ ಆಗುತ್ತದೆ ಎಂದು ಹೇಳಿ ಆರು ಜಿಲ್ಲೆಗಳಿಗೆ ಮಾತ್ರ Article 371(D) ಪಕಾರ amendment ಮಾಡಿ ಎಂದು ಹೇಳಿದ್ದರೇ ಹೊರತು ಉಳಿದಂತೆ ಏನನ್ನೂ ಮಾಡಿಲ್ಲ. ಒಂದು ನಿಮಿಷ ನಾನು ನಿಮಗೆ clarify ಮಾಡುತ್ತೇನೆ. ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿದರು, ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿಯೂ ಕೂಡ ಕೇವಲ ಆರು ಜಿಲ್ಲೆಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದರೇ ಹೊರತು ರಾಜ್ಯದ ಬೇರೆ ಯಾವುದೇ ತಾಲ್ಲೂಕುಗಳು ಅಥವಾ ಜಿಲ್ಲೆಗಳನ್ನು ಮಾಡಿಲ್ಲ ಎಂದು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಈಗ ಕೇಂದ್ರದ ಶ್ರೀ ಮನಮೋಹನ್ ಸಿಂಗ್ ಸರ್ಕಾರ Article 371(J) ಅನ್ನು ಜಾರಿಗೊಳಿಸಿದ್ದಾರೆ ಇದನ್ನು ನಾವು ನಿಜಕ್ಕೂ ಹೈದರಾಬಾದ್ ಕರ್ನಾಟಕದ ಜನರ ಪರವಾಗಿ ಅಭಿನಂದಿಸುತ್ತೇವೆ. ಆದರೆ ಮೂರಾಲ್ಕು ವರ್ಷಗಳ ಕಾಲ ಕಾದು ನೋಡೋಣ. ಈ Article 371(J)ಗೆ ಕೇಂದ್ರ ಸರ್ಕಾರದಿಂದ ಯಾವ್ಯಾವ ಅನುಕೂಲಗಳು ಬಂದು ಆ ಭಾಗದ ಜನ ಉದ್ಧಾರವಾಗುತ್ತಾರೆ ಎಂಬುದನ್ನು ನಾವು ಕಾದು ನೋಡೋಣ.

ಶ್ರೀ ಸಿದ್ದರಾಮಯ್ಯ: ಕುಮಾರಸ್ವಾಮಿಯವರೆ, ಈಗ ಒಂದೇ ಉದ್ದೇಶಕ್ಕಾಗಿ ಎಲ್ಲರ ಹೋರಾಟ ಇದ್ದುದು. ಹಾಗಾದರೆ ನೀವು ಮುಖ್ಯಮಂತ್ರಿಯಾಗಿದ್ದಾಗ ಯಾವ ನಿರೀಕ್ಷೆ ಇಟ್ಟುಕೊಂಡು ಹೋಗಿ ಹೇಳಿದ್ದಿರಿ? ನಾವು ಯಾವ ನಿರೀಕ್ಷೆ ಇಟ್ಟುಕೊಂಡಿದ್ದೆವು? ಹೈದರಾಬಾದ್–ಕರ್ನಾಟಕ ಭಾಗ ಹಿಂದುಳಿದಿದೆ. ಅವರಿಗೆ ವಿಶೇಷ ಸ್ಥಾನಮಾನವನ್ನು ಕೊಡಬೇಕು. ಅದಕ್ಕೋಸ್ಕರವಾಗಿಯೇ Article 371ಗೆ ತಿದ್ದುಪಡಿಯಾಗಬೇಕು. ಅದನ್ನು

ಮಾಡಬೇಕೆಂದು ತಾನೆ ನಾವೆಲ್ಲಾ ಒತ್ತಾಯ ಮಾಡುತ್ತಿದ್ದುದು. ಈಗ ನಾನೇನು ಪ್ರಸ್ತಾಪ ಮಾಡಿದೆ ಎಂದರೆ ಅದನ್ನು ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಮಾನ್ಯ ಅಡ್ವಾಣಿಯವರು Deputy Prime Minister ಆಗಿರುವಾಗ ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಈ ತಿದ್ದುಪಡಿ ಮಾಡುವುದಕ್ಕಾಗುವುದಿಲ್ಲವೆಂದು ಪತ್ರವನ್ನು ಬರೆದಿದ್ದರು. You are also aware of it.

ಅಧ್ಯಕ್ಷರು: ಆಯಿತು ಬಿಡಿ, ಅವರಿಗೆ ಅನ್ನಿಸಿದ್ದನ್ನು ಅವರು ಪತ್ರದಲ್ಲಿ ಬರೆದುಕೊಂಡಿದ್ದರು.

ಶ್ರೀ ಬಸವರಾಜ ರಾಯರೆಡ್ಡಿ: ಆಂಧ್ರ ಪ್ರದೇಶದಲ್ಲಿರುವಂಥ ಪರಿಸ್ಥಿತಿ ಕರ್ನಾಟಕದಲ್ಲಿಲ್ಲವೆಂದು ಅವರು ಹೇಳಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಕುಮಾರಸ್ವಾಮಿಯವರು ಆ ಮಾತನ್ನು ಏಕೆ ಹೇಳಿದರೆಂದು ನೀವು ಅರ್ಥ ಮಾಡಿಕೊಳ್ಳಲಿಲ್ಲ. ಆಗ Article 371(D) ಬೇಕೆಂದು ನಮ್ಮ ಹೋರಾಟ ಇತ್ತು. ನಮಗೆ ಸಿಕ್ಕಿದ್ದು Article 371(D) ಅಲ್ಲ, Article 371(J). ಒಂದು ನಿಮಿಷ ನಾನು ಹೇಳುತ್ತೇನೆ ಕೇಳಿ. Article 371(J) ನಲ್ಲಿ ಏನು ಮಾಡಿದ್ದಾರೆಂದು ಹೇಳುತ್ತೇನೆ ಕೇಳಿ, ಇವತ್ತು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ್ದು ಎರಡನ್ನೂ ಸೇರಿಸಿ ಮಾಡಿದ್ದಾರೆ. ಹಾಗಾಗಿ Article 371(D) dilute ಆಗಿದೆ. ಅದನ್ನು ನೀವು ಅರ್ಥ ಮಾಡಿಕೊಳ್ಳಿ. ಆದರೆ ಇನ್ನು ಮೂರ್ನಾಲ್ಕು ವರ್ಷ ತಡೆಯಿರಿ, ಅದರ ಪರಿಣಾಮ ಏನಾಗುತ್ತದೆ, ಅದರಿಂದ ಎಷ್ಟು ಲಾಭವಾಗುತ್ತದೆ ಎಂದು ಆಗ ಅರ್ಥವಾಗುತ್ತದೆ. ನಾವೂ delegation ಹೋಗಿದ್ದೆವು. ಏಕೆ ಅಂದು ಅಡ್ವಾಣಿಯವರು ಬೇಡವೆಂದರು ಎಂದರೆ you could have done better works ಎಂದು ಅವರು ಹೇಳಿದ್ದು ನಿಜ. ಮುಖ್ಯಮಂತ್ರಿಗಳು ಹೇಳಿದ್ದು ನಿಜ. ಆದರೆ Article 371(D) ಆಗಲಿಲ್ಲ.

(ಗೊಂದಲ)

ಅಧ್ಯಕ್ಷರು: ಆಯಿತು, ಈಗ ಜಾರಿಗೆ ಬಂದಿದೆಯಲ್ಲ, ನೋಡೋಣ ಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ: ಹೈದರಾಬಾದ್–ಕರ್ನಾಟಕಕ್ಕೆ ನೀವೇಕೆ ಕಲ್ಲು ಹಾಕುತ್ತೀರಿ? ನಮಗೆ ಒಳ್ಳೆಯದು ಆಗಿದೆ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಕಲ್ಲು ಹಾಕುತ್ತಿಲ್ಲ, ನಿಮಗೆ ನಿಜವಾದ ಅಧಿಕಾರ ಬರಲಿ, ನಿಜವಾಗಿ ಅಭಿವೃದ್ಧಿ ಆಗಲಿ ಎಂಬ ಕಳಕಳಿಯಿಂದ ಹೇಳುತ್ತಿದ್ದೇನೆ. ಕೇವಲ ಪುಸ್ತಕದಲ್ಲಿ ಅಭಿವೃದ್ಧಿ ಬೇಡವೆಂದು ಹೇಳುತ್ತಿದ್ದೇನೆ. ಅದನ್ನು ಕೇಳುವಂಥ ವ್ಯವಧಾನ ನಿಮಗಿಲ್ಲವೆಂದರೆ ನಾವೇನು ಮಾಡೋಣ?

(ಗೊಂದಲ)

ಅಧ್ಯಕ್ಷರು: ರಾಯರೆಡ್ಡಿ, ಬೊಮ್ಮಾಯಿಯವರೆ, ಸಾಕು ಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ: ನೋಡಿ, 70% ಸೀಟುಗಳನ್ನು ಶಿಕ್ಷಣದಲ್ಲಿ, ನೌಕರಿಯಲ್ಲಿ ಆ ಭಾಗದ ಜನರಿಗೆ ಕಾದಿರಿಸಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಈಗಾಗಲೇ ಸರ್ಕಾರಿ ನೌಕರಿಯಲ್ಲಿ 8% ಇದ್ದಾರೆ ಆ ಭಾಗದ ಜನ select ಆಗಿಯೇ ಆಗುತ್ತಾರೆ, ಆ ಭಾಗದವರಿಗೆ ನೀವು ಏನು ಉಪಕಾರ ಮಾಡಿದಂತಾಯಿತು? ಆ ಭಾಗದ ಜನ ಆಯ್ಕೆ ಆಗಿಯೇ ಆಗುತ್ತಾರೆ.

(ಗೊಂದಲ)

ಅಧ್ಯಕ್ಷರು: ನಿಮ್ಮದೇ ಕಥೆ ಆಯಿತಲ್ರೀ, ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಜಾರಿಗೆ ಬಂದಿದೆ, Board ಆಗಿದೆ, ಎಲ್ಲಾ ಆಗಿದೆ. ಆಯಿತು ಬಿಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು reply ಮಾಡುವಾಗ ಈ ತರಹದ ವಾತಾವರಣ ಸೃಷ್ಟಿಯಾಗುವುದನ್ನು ನಾವು ಎಲ್ಲಿಯೋ ನೋಡಿಲ್ಲ. This is not fair.

Opposition Leader, Leader of the House, House ಅನ್ನು address ಮಾಡುವಾಗ ನಾವು maintain ಮಾಡಬೇಕಾಗಿರುವ decorum ಬೇರೆ. I would appeal to you with folded hands, the dignity of this House is even more important than other things. I think, you should put an end. ತಾವು ಏಕೋ ಇವತ್ತು ಸ್ವಲ್ಪ lenient ಆಗಿ ಇದ್ದೀರಿ. This is not fair.

MR.SPEAKER: I am equally consistent with the precedent.

SRI K.R. RAMESH KUMAR: Sir, we are all the witness to what has happened.

MR. SPEAKER: I am quite conscious about this.

SRI K.R. RAMESH KUMAR: Please, let it be enforced.

MR.SPEAKER: ಆಯಿತು, you tell your own colleagues.

ಶ್ರೀ ಸಿದ್ದರಾಮಯ್ಯ: ನಾನು ಆ ಕಡೆ ನೋಡುವುದನ್ನೇ ಬಿಟ್ಟುಬಿಡುತ್ತೇನೆ, ನಿಮ್ಮ ಕಡೆ ನೋಡುತ್ತೇನೆ. ಅವರ ಕಡೆ ನೋಡುವುದರಿಂದ, ಇವರ ಕಡೆ ನೋಡುವುದರಿಂದ ಏಕೋ ಇವರಿಗೆ ಕಸಿವಿಸಿ ಆಗಿಬಿಡುತ್ತಿದೆ. Clarifications ಏನಾದರೂ ಇದ್ದರೆ ಆಮೇಲೆ ಕೇಳಿ ಪ್ಲೀಸ್. ಮಾನ್ಯ ಅಧ್ಯಕ್ಷರೆ, Article 371(J) ಗೆ ಆಂಧ್ರದ ರೀತಿಯಲ್ಲಿ ಮಾಡಬೇಕೆಂಬುದು ನಾವು ಒತ್ತಾಯ ಮಾಡುತ್ತಿದ್ದೇವೆ. ಅವರು ಒಂದು ಸಾರಿ ಹೇಳಿದ್ದರು, ಮಹಾರಾಷ್ಟ್ರದ ರೀತಿಯಲ್ಲಿರುವಂತೆ ವಿದರ್ಭ ಮಾದರಿಯಲ್ಲಿರುವಂತೆ ಮಾಡೋಣವೆಂದು ಹೇಳಿದ್ದರು, ಅದಕ್ಕೆ ನಾವು ಒಪ್ಪಲಿಲ್ಲ. ಆಮೇಲೆ Article 371 (J) ಆಗಿರುವುದು ಇದು ಇವೆರಡಕ್ಕೂ ಸೇರಿ implement ಆಗಿರುವಂತಹದ್ದು. ಅದರಿಂದ ಮಾನ್ಯ ಅಧ್ಯಕ್ಷರೆ, ಇದು ಬಂದ ತಕ್ಷಣವೇ ನಮ್ಮ ಸರ್ಕಾರ ಮಾನ್ಯ ಹೆಚ್.ಕೆ. ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ, ಅವರೆಲ್ಲಾ ಇಡೀ ಹೈದರಾಬಾದ್–ಕರ್ನಾಟಕವನ್ನೆಲ್ಲಾ ಸುತ್ತಿ ಕೇವಲ 45 ದಿನಗಳಲ್ಲಿ ವರದಿ ಕೊಟ್ಟರು.

ಅಧ್ಯಕ್ಷರು: ಅದು ಆಗಿ ಹೋಯಿತಲ್ಲಾ? ಮಸೂದೆಯನ್ನು ಮಂಜೂರು ಮಾಡಿದರು.

ಶ್ರೀ ಸಿದ್ದರಾಮಯ್ಯ: ಆ report ಅನ್ನು ನಾವು ಕೇಂದ್ರ ಸರ್ಕಾರಕ್ಕೆ Submit ಮಾಡಿ, ನಮ್ಮ ನಿಲುವನ್ನು ಹೇಳಿ ರಾಷ್ಟ್ರಪತಿಗಳ ಅಂಕಿತ ಹಾಕಿ, ಅದಕ್ಕೆ ಗೌರ್ನರ್‌ರವರು ಅಂಗೀಕಾರ ಕೊಟ್ಟರು. ನಂತರ ನಾವು ಅದನ್ನು 23.10.2013 ರಲ್ಲಿ ಆದೇಶ ಹೊರಡಿಸಿ ಈಗ ಮಂಡಳಿ ಕೂಡ ರಚನೆ ಆಗಿ ಹೋಗಿದೆ. ಗುಲ್ಬರ್ಗಾ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮತ್ತು ಪೌರಾಡಳಿತ ಸಚಿವರು ಮಾನ್ಯ ಖಮರುಲ್ಲಾ ಇಸ್ಲಾಂರವರನ್ನು ಅಧ್ಯಕ್ಷರನ್ನಾಗಿ ನಾವು ಮಾಡಿದ್ದೇವೆ. ಆ ಭಾಗದಲ್ಲಿರತಕ್ಕಂತಹ ಅನೇಕ ಜನ ಚುನಾಯಿತ ಪ್ರತಿನಿಧಿಗಳನ್ನು ಕೂಡ ಸದಸ್ಯರನ್ನಾಗಿ ಮಾಡಿದ್ದೇವೆ. ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆ ಭಾಗದ ಜನರಿಗೆ ಉದ್ಯೋಗದಲ್ಲಿ ಮೀಸಲಾತಿ ಕೊಡುವಂತಹ ಕೆಲಸ ಆಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಸರ್, ಒಂದು clarification. ಆಮೇಲೆ ಉತ್ತರ ಕೊಡಿ.

ಅಧ್ಯಕ್ಷರು: ಆಮೇಲೆ clarification ಕೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಒಂದೇ ಒಂದು ನಿಮಿಷ ಕಾಲಾವಕಾಶ ಕೊಡಿ.

ಅಧ್ಯಕ್ಷರು: ಕುಮಾರಸ್ವಾಮಿಯವರೆ ನನಗೆ ಪಾಠ ಹೇಳುತ್ತಿದ್ದಾರೆ. ನಾನು ಸಮಯ ಕೊಡುವುದಿಲ್ಲ ರೀ. ನಾನು ಇನ್ನೊಬ್ಬರಿಂದ ಪಾಠ ಹೇಳಿಸಿಕೊಳ್ಳುವುದಕ್ಕೆ ತಯಾರಿಲ್ಲ. ಅವರ speech ಆದಮೇಲೆ ನಿಮ್ಮ clarification ಕೇಳಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಸರ್, ಒಂದು ಸೆಕೆಂಡ್, ಸರ್.

ಅಧ್ಯಕ್ಷರು: NO. NO. please, ದಯವಿಟ್ಟು, ಕುಮಾರಸ್ವಾಮಿಯವರೆ, ಇಲ್ಲಿ ಸೀನಿಯರ್ ಮೆಂಬರ್ ಇದ್ದೀರಿ.

SRI H.D. KUMARASWAMY: Requirement for Hydcrabad-Karnataka people under Article 371 (J) is unlikely in near future ಎಂದು article ಬರೆದಿದ್ದಾರೆ.

ಅಧ್ಯಕ್ಷರು: ಆಯಿತು. ನಿಮ್ಮ ಪಾಡಿಗೆ ನೀವು ಉತ್ತರ ಹೇಳಿ.

ಶ್ರೀ ಸಿದ್ದರಾಮಯ್ಯ: ಆ ಭಾಗದ ಜನರ ಉದ್ದೇಶ ಏನಿದೆ? ಏತಕ್ಕೋಸ್ಕರ ಹೋರಾಟ ಮಾಡುತ್ತಿದ್ದರು? ಅಲ್ಲಿ ಉದ್ಯೋಗದಲ್ಲಿ ಮೀಸಲಾತಿ ಬೇಕು, ಶಿಕ್ಷಣದಲ್ಲಿ ಮೀಸಲಾತಿ ಬೇಕು, ರಾಜ್ಯ ಮಟ್ಟದಲ್ಲಿ ಕೂಡ ಮೀಸಲಾತಿ ಸಿಗಬೇಕು ಎನ್ನುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅದನ್ನು ಮಾಡುತ್ತೇವೆ. ಬಹುಶ: ಇದಕ್ಕೆ ಎಲ್ಲರದ್ದೂ ಕೂಡ Co-operation ಇದೆ. ಇಡೀ ಸದನದ ಹಾಗೂ ಇಡೀ ರಾಜ್ಯದ ಜನರ Co-operation ಇದೆ. ಅವರಿಗೂ ಕೂಡ ನಾನು ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುವುದಕ್ಕೆ ಬಯಸುತ್ತೇನೆ. ಇದರಿಂದ ಏನು regional imbalance ಇದೆ, ಆ regional imbalance ಕಡಿಮೆಯಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದರಿಂದ ನಮ್ಮ ಸರ್ಕಾರ ಈ ಸಂದರ್ಭದಲ್ಲಿ ಇದನ್ನು ಮಾಡಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಅರ್ಧ ಗಂಟೆ ಊಟಕ್ಕೆ ಮುಂದೂಡೋಣ. ಈಗ ಸದನವನ್ನು ಪುನ: 2.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು 1.33 ಗಂಟೆಗೆ ಮುಂದೂಡಿ ಪುನ: 2.00 ಗಂಟೆಗೆ ಸೇರಲು ತೀರ್ಮಾನಿಸಲಾಯಿತು)

(ಸದನವು ಭೋಜನದ ನಂತರ ಮಧ್ಯಾಹ್ನ 2 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು, ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು: ಮಾನ್ಯ ಸದಸ್ಯರೆ, ಈಗ ಒಂದು ಪ್ರಕಟಣೆ ಇದೆ.